# ನೇಸರು
## ತಿಂಗಳೋಲೆ
## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XX - 2 ಫೆಬ್ರವರಿ 2002

### ಈ ಸಂಚಿಕೆಯಲ್ಲಿ

ಅಸೋಸಿಯೇಶನ್‌ನಲ್ಲಿ

ಶ್ರೀ ದೇಶಪಾಂಡೆಯವರು ಅಸೋಸಿಯೇಷನ್ನಿಗೆ ಭೇಟಿ

ಪಂಡಿತ ಹರಿಪ್ರಸಾದ್ ಚೌರಸಿಯ ಅವರ ವೇಣುವಾದನ 2

ಅಸೋಸಿಯೇಷನ್ನಿನಲ್ಲಿ ಪ್ರತಿಭಾ ಹಾಗೂ ಕ್ರೀಡಾ ಸ್ಪರ್ಧೆ • ರಮಾವಸಂತ್ 3

ಭಾರತೀಯ ಕಲೆ
ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ
ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು 4

Gandhi on Trusteeship 8
*Courtesy :* Trusteeship by M.K. Gandhi
Compiled by Ravindra Kelkar
Published by Navajivan
Publising House, Ahmedabad

ಸುತ್ತ-ಮುತ್ತ 11

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

## ಅಸೋಸಿಯೇಷನ್ನಲ್ಲಿ

ಜನವರಿ 19ರಂದು ಮೈಸೂರು ಅಸೋಸಿಯೇಷನ್, ತನ್ನ ಅಮೃತ ಮಹೋತ್ಸವದ ಅಂಗವಾಗಿ, ಪಂಡಿತ ಹರಿಪ್ರಸಾದ್ ಚೌರಸಿಯ ಅವರ ವೇಣುವಾದನವನ್ನು ಮುಂಬೈಯಿನ ನೆಹರು ಸೆಂಟರ್ ಸಭಾಂಗಣದಲ್ಲಿ ಏರ್ಪಡಿಸಿದ್ದಿತು. ಅಂದಿನ ಕಾರ್ಯಕ್ರಮದಲ್ಲಿ ಪಂಡಿತ ಹರಿಪ್ರಸಾದ್ ಅವರ ಜೊತೆಗೆ ಪಂಡಿತ ಭವಾನಿಶಂಕರ್ ಅವರು ಪಾಖವಾಜದಲ್ಲಿಯೂ ಮತ್ತು ಪಂಡಿತ ವಿಜಯೇಂದ್ರ ಘಾಟೆ ಅವರು ತಬಲಾದಲ್ಲಿಯೂ ಪಕ್ಕವಾದ್ಯ ನುಡಿಸಿದರು. ಕರ್ನಾಟಕ ಸರ್ಕಾರದ ಬೃಹತ್ ಉದ್ಯೋಗದ ಮಂತ್ರಿಯಾದ ಸನ್ಮಾನ್ಯ ಆರ್.ವಿ. ದೇಶಪಾಂಡೆಯವರು ಅಂದಿನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದರು.

ಕಾರ್ಯಕ್ರಮಕ್ಕೆ ಮುಂಚೆ ಅಸೋಸಿಯೇಷನ್ನಿಗೆ ಭೇಟಿ ಇತ್ತು ಅದರ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದ ಅವರು, ಹೊರನಾಡಿನಲ್ಲಿ ಕನ್ನಡ ಮತ್ತು ಸಂಸ್ಕೃತಿಯ ಬೆಳವಣಿಗೆಗಾಗಿ ಅಸೋಸಿಯೇಷನ್ ಮಾಡುತ್ತಿರುವ ಕಾರ್ಯಕ್ರಮಗಳ ಬಗ್ಗೆ ಮೆಚ್ಚಿಗೆಯನ್ನು ಸೂಚಿಸಿದರು.



*ಶ್ರೀ ದೇಶಪಾಂಡೆಯವರು ಅಸೋಸಿಯೇಷನ್ನಿಗೆ ಭೇಟಿ ಇತ್ತಾಗ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಅವರಿಗೆ ಪುಷ್ಪವನ್ನು ಕೊಡುತ್ತಿರುವುದು.*



*ಅಸೋಸಿಯೇಷನ್ನಿನ ಸದಸ್ಯರೊಂದಿಗೆ ದೇಶಪಾಂಡೆಯವರು ಮಾತುಕತೆ ನಡೆಸುತ್ತಿದ್ದಾರೆ.*



*ಮುಖ್ಯ ಅತಿಥಿಗಳಾದ ದೇಶಪಾಂಡೆಯವರು ಅಂದಿನ ಕಲಾವಿದರಾದ ಪಂ. ಹರಿ ಪ್ರಸಾದ್ ಚೌರಾಸಿಯಾ ಅವರಿಗೆ ಪುಷ್ಪ ಗುಚ್ಛವನ್ನು ಕೊಡುತ್ತಿರುವುದು.*



*ಪಂ. ಹರಿಪ್ರಸಾದ ಚೌರಸಿಯಾ ಅವರ ಜೊತೆಗೆ ಪಂ. ಭವಾನಿಶಂಕರ್ ಪಾಕವಾಜವನ್ನು ಮತ್ತು ಪಂ. ವಿಜಯೇಂದ್ರ ಘಾಟೆ ತಬಲವನ್ನೂ ನುಡಿಸಿದರು.*

# ಅಸೋಸಿಯೇಷಿನ್ನಿನಲ್ಲಿ ಪ್ರತಿಭಾ ಹಾಗೂ ಕ್ರೀಡಾ ಸ್ಪರ್ಧೆ

ಮುಂಚಿನ ಕಾಲದಲ್ಲಿ ಮಕ್ಕಳಿಗೆ ಆಟದ ಸಮಯ ಪಾಠದ ಸಮಯ, ಊಟದ ಸಮಯ, ವಿಶ್ರಾಂತಿ ಎಂದು ವೇಳಾ ಪಟ್ಟಿ ಇರುತ್ತಿತ್ತು. ಎಲ್ಲ ಕೆಲಸಗಳಿಗೂ ವೇಳೆಯು ದೊರೆಯುತ್ತಿತ್ತು. ಆದರೆ ಈಗ ಹಾಗಿಲ್ಲ ಎಲ್ಲ ಸಮಯವೂ ಪಾಠದ ಸಮಯವೆ ಆಗಿದೆ. ದೂರದ ಶಾಲೆಗೆ ಮುಂಜಾನೆ ಮಣಗಟ್ಟಲೆ ಪುಸ್ತಕಗಳನ್ನು ಹೊತ್ತು ಮುಸ್ಸಂಜೆಗೆ ಬರುವುದರಲ್ಲೆ ದಿನವು ಕಳೆದು ಹೋಗುತ್ತದೆ. ಶಾಲೆಯ ನಂತರ Tution ಅದು ಇದು ಅಂತ. ಹೀಗಾಗಿ ಪಠ್ಯೇತರ ಚಟುವಟಿಕೆಗಳಿಗೆ ಅವಕಾಶವೇ ಆಗುವುದಿಲ್ಲ. ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆ ಹೊರಬರಲು ಅವಕಾಶವೇ ಆಗುವುದಿಲ್ಲ. ಸ್ಥಳದ ಅಭಾವ, ವೇಳೆಯ ಅಭಾವ, ತಂದೆ ತಾಯಿಯರ ಪ್ರೋತ್ಸಾಹದ ಅಭಾವ ಹೀಗೆ ಇನ್ನೂ ಅನೇಕ ತೊಂದರೆಗಿಂದಾಗಿ ಮಕ್ಕಳ ಪ್ರತಿಭೆಯು ಹೊರ ಬರಲು ಆಗುವುದೇ ಇಲ್ಲ. ಹೀಗಾಗದಿರಲೆಂದು ನಮ್ಮ ಅಸೋಸಿಯೇಷನ್ನಿನವರು ಪ್ರತಿವರ್ಷವೂ ಪ್ರತಿಭಾ ಸ್ಪರ್ಧೆ ಮತ್ತು ಆಟೋಟಗಳ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ. ಈ ಸ್ಪರ್ಧೆಯು ಮಕ್ಕಳಲ್ಲಿರುವ ಪ್ರತಿಭೆಯನ್ನು ತರಲು, ಅವರಿಗೆ ಒಂದು ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಹಾಗೂ ಧೈರ್ಯದಿಂದ ಭಾಗವಹಿಸಲು ಅವಕಾಶವಾಗುತ್ತದೆ.

ಅಂತೆಯೇ ಈ ವರ್ಷ ಜನವರಿ 12 ಹಾಗೂ 13ರಿಂದ ಪ್ರತಿಭಾ ಸ್ಪರ್ಧೆ ಮತ್ತು ಆಟಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. 12 ಶನಿವಾರದಂದು ಸಂಜೆ ಡ್ರಾಯಿಂಗ್‌ಸ ಶ್ಲೋಕ, ಸಂಗೀತ, ಫ್ಯಾನ್ಸಿಡ್ರೆಸ್, ಟ್ಯಾಲೆಂಟ್ ಐಕ್ ಏನ್ ರೈಟ್ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಶ್ರೀಮತಿ ಸಂಧ್ಯಾ, ಶ್ರೀಮತಿ ನಾಗಮಣಿ ಶೇಷಾದ್ರಿ, ಶ್ರೀಮತಿ ಪ್ರಮಿಳಾ ಹತ್ತಂಗಡಿ ಇವರುಗಳನ್ನು ತೀರ್ಪುಗಾರರಾಗಿ ಆಹ್ವಾನಿಸಲಾಗಿತ್ತು. ಹಿರಿಯಕಿರಿಯ ಎಲ್ಲ ವಯಸ್ಸಿನ ಸದಸ್ಯರೂ ಹಾಗೂ ಅವರ ಕುಟುಂಬದವರು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ಭಾನುವಾರ 13ರ ಬೆಳಿಗ್ಗೆ 10-30 ಗಂಟೆಗೆ ನ್ಯಾಷನಲ್ ಕನ್ನಡ, ಎಜುಕೇಶನ್ ಸೊಸೈಟಿಯ ಶಾಲೆಯ ಮೈದಾನದಲ್ಲಿ ಕ್ರೀಡೆಗಳ ಸ್ಪರ್ಧೆಗಳನ್ನೇರ್ಪಡಿಸಲಾಗಿತ್ತು.

ಸದಸ್ಯರೆಲ್ಲರೂ ಉತ್ಸುಕರಾಗಿ ಬಂದು ಪಾಲ್ಗೊಂಡರು. 5 ವರ್ಷದೊಳಗಿನ ಮಕ್ಕಳಿಗೂ ಸಹ ಆಟಗಳನ್ನಾಡಿಸಲಾಯಿತು. ಆಟ ಎಂದರೆ ಎಲ್ಲರಿಗೂ ಆಸಕ್ತಿ, ಭಾನುವಾರ ರಜಾದಿನ ಮನೆಯಲ್ಲಿ ಆರಾಮವಾಗಿರುವುದನ್ನು ಬಿಟ್ಟು ಆಟಗಳಲ್ಲಿ ಪಾಲ್ಗೊಳ್ಳಲು ಹರ್ಷ ಚಿತ್ತರಾಗಿ ಬಂದಿದ್ದರು. ಅವರವರ ವಯಸ್ಸಿಗನುಗುಣವಾಗಿ ಆಟಗಳನ್ನು ವಿಂಗಡಿಸಿದ್ದರು. Running race, Book Balancing, Lemon & Spoon, Shot put ಮೊದಲಾದ ಅನೇಕ ಆಟಗಳಿದ್ದವು. ಎಲ್ಲರಿಗೂ Glucose ಮಿಶ್ರಿತ ಶರಬತ್ತನ್ನು ಕೊಡಲಾಯಿತು. ದಣಿವಾಗದಿರಲೆಂದು, ಆಟಗಳ ನಂತರ ಸೊಗಸಾದ ಭೋಜನವನ್ನೇರ್ಪಡಿಸಿದ್ದರು. ಊಟ ಮಾಡಿ ಸುಸ್ತಾಗಿ ಮನೆಗಳಿಗೆ ತೆರಳಿದರು.

ಜನವರಿ 26 ಗಣರಾಜ್ಯ ದಿನದಂದು ಬೆಳಿಗ್ಗೆ ಅಸೋಸಿಯೇಷನ್ನಿನಲ್ಲಿ ಶ್ರೀ ರಘುನಾಥ್‌ರವರು ಧ್ವಜಾರೋಹಣ ಮಾಡಿದರು. ಸಂಜೆಗೆ ಆ ಎರಡು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆಯನ್ನು ಮಾಡಲಾಯಿತು. ಪ್ರಾರಂಭಕ್ಕೆ ಕುಮಾರಿ ಕೃತಿಕಾ ಉಪಾಧ್ಯಾಯ ಪ್ರಾರ್ಥನಾ ಗೀತೆಯನ್ನು ಹೇಳಿದಳು. ನಂತರ ಪುಟಾಣಿಗಳಾದ ಶಶಾಂಕ್, ಅನಿರುಧ, ಸುಪ್ರಿಯಾ ಇವರುಗಳು ಹಾಡುಗಳನ್ನು ಹೇಳಿದರು. ಪೃಥ್ವಿ, ಕ್ಷಮಾ, ಶುಭದಾ ಎಲ್ಲರೂ ನರ್ತನ ಮಾಡಿದರು.

ನಂತರ ಶ್ರೀಮತಿ ಲಲಿತಾ ದೊರೆಸ್ವಾಮಿ ಅವರು ಎಲ್ಲರಿಗೂ ಬಹುಮಾನ ಹಾಗೂ 'ಅರ್ಹತಾ ಪತ್ರ'ಗಳನ್ನು ನೀಡಿದರು. ಶ್ರೀ ಸುದರ್ಶನ್‌ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಗಿಯಿತು. ನಂತರ ಭೋಜನ ವ್ಯವಸ್ಥೆ, ಎಲ್ಲರೂ ಬಹುಮಾನಗಳನ್ನು ತೆಗೆದುಕೊಂಡು ಸಂತೋಷದಿಂದ ಹಿಂದಿರುಗಿದರು.

-- ರಮಾವಸಂತ್

**PROGRAMME :**

**Saturday 16th February 2002**

**Maghi Ganapathi Pooja**

and

**Sri Satyanarayana Pooja**

5.00 p.m. to 7.00 p.m.

7.15 p.m. Maha Mangalarathi

&

Prasad Viniyoga

Members wishing to perform Severtha should contact the office

**All are cordially invited**

## ಆಕಾಶವಾಣಿಯಲ್ಲಿ ಅಸೋಸಿಯೇಶನ್ನಿನ ಕಲಾವಿದರಿಂದ ರೇಡಿಯೋ ನಾಟಕ

ಪ್ರಸಾರ ಭಾರತಿ, ಆಕಾಶವಾಣಿಯ ಮುಂಬೈ ಕೇಂದ್ರವು ಅಸೋಸಿಯೇಶನ್ನಿನ ಕಲಾವಿದರು ಪ್ರಸ್ತುತ ಪಡಿಸುವ ಸಿ.ಎಸ್. ಶಂಕರ ನಾರಾಯಣ ರಾವ್ ವಿರಚಿತ ಕನ್ನಡ ನಾಟಕ ''ಸಂದೇಶ ಪ್ರತಿ ಸಂದೇಶ'ವನ್ನು ದಿನಾಂಕ ೧೭ ಮತ್ತು ೨೪ನೇ ಫೆಬ್ರವರಿ ೨೦೦೨ ರಂದು ಮಧ್ಯಾಹ್ನ ೨.೩೦ಕ್ಕೆ ಪ್ರಸಾರಮಾಡುತ್ತದೆ.

ಎಲ್ಲರೂ ತಪ್ಪದೆ ಕೇಳಿರಿ.

## ಮಹಾಶಿವರಾತ್ರಿ ಪೂಜೆ

ಮಂಗಳವಾರ, ಮಾರ್ಚ್ ೧೨ರಂದು ಮಹಾಶಿವರಾತ್ರಿ ಪ್ರಯುಕ್ತ ಅಸೋಸಿಯೇಶನ್ನಿನ ಕಲಾವಿದರಿಂದ ಸಂಜೆ ೭.೦೦ಕ್ಕೆ ಭಜನೆ, ೭.೪೫ಕ್ಕೆ ಪೂಜೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ.

*ಎಲ್ಲರಿಗೂ ಆದರದ ಸ್ವಾಗತ*

# ಭಾರತೀಯ ಕಲೆ

ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚಾರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

## ಪ್ರವೇಶ

ಭಾರತದ ಪ್ರಾರಂಭದ ಇತಿಹಾಸವು ಇಂಡಸ್ ನಾಗರೀಕತೆಯ ವಿಶಿಷ್ಟ ಅವಶೇಷಗಳನ್ನು ಬಿಟ್ಟರೆ, ಕ್ರಿ.ಪೂ. ೬ನೇ ಶತಮಾನಕ್ಕಿಂತ ಹಿಂದಿನ ಕಾಲದ ಕಲಾ ಸಾಧನೆಗಳ ಬಗ್ಗೆ ಭಾರತದಲ್ಲಿ ಕಂಡು ಬರುವ ಧಾರ್ಮಿಕ ಬೆಳವಣಿಗೆಗಳು, ಎಲ್ಲರಿಗೂ ತಿಳಿದಿರುವಂತೆ ಹಿಂದೂ ಧರ್ಮವು ಆರ್ಯ ಹಾಗೂ ದ್ರಾವಿಡ ಸಂಸ್ಕೃತಿಗಳ ಬೆಸುಗೆಯ ಫಲವಾಗಿದೆ. ಇಂಡಸ್ ಸಂಸ್ಕೃತಿಯು ಇದಕ್ಕೆ ಬಹುಶಃ ಸೇರಿಕೊಂಡಿರಬಹುದು. ಆರ್ಯರು ಪ್ರಾಕೃತಿಕ ಶಕ್ತಿಗಳನ್ನು ದೇವತೆಗಳಾಗಿ ಮೂರ್ತೀಕರಿಸಿ ಪೂಜಿಸುತ್ತಿದ್ದರು. ಉದಾ : ಇಂದ್ರ (ಮಳೆ) ವರುಣ (ಸಮುದ್ರ) ವಾಯು (ಗಾಳಿ) ಇತ್ಯಾದಿ. ಹೀಗೆ ಮೊದಲು ವಾಸವಾಗಿದ್ದ ನಿವಾಸಿಗಳ ದೇವತೆಗಳನ್ನು ಒಂದುಗೂಡಿಸಿ ತಮ್ಮದೇ ಆದ ದೇವರನ್ನು ರೂಪಿಸಿಕೊಂಡರು. ವಿಷ್ಣು ಹಾಗೂ ಶಿವ ಇವುಗಳಲ್ಲಿ ಪ್ರಮುಖವಾದುವು. ಮುಂದೆ ವಿವಿಧ ಕುಲಗಳು ತಮ್ಮದೆ ಆದ ದೇವರನ್ನು ಆಯ್ದುಕೊಂಡು ಪ್ರತ್ಯೇಕ ಭಕ್ತಿಪಂಥ ಹಾಗೂ ವೈಯಕ್ತಿಕ ಪೂಜೆಯ ಅನುಸಾರವಾಗಿ ಪ್ರತ್ಯೇಕದೇವರನ್ನು ಆರಿಸಿಕೊಂಡರು. ಇದರ ಫಲವಾಗಿ ಎರಡು ಪ್ರಮುಖ ಮತಗಳು ಹುಟ್ಟಿಕೊಂಡವು. ಅವು ವೈಷ್ಣವ ಹಾಗೂ ಶೈವ ಮತಗಳು. ಕಡೆಗೆ ಈ ವಿಂಗಡನೆ ಮುಖ್ಯ, ಏಕೆಂದರೆ ಪ್ರತಿಯೊಂದು ದೇವರಿಗೂ ಒಂದು ಸಂಕೇತವೆಂಬುದು ಅಸ್ತಿತ್ವಕ್ಕೆ ಬಂದಿತು. ತ್ರಿಮೂರ್ತಿಯಾದ ಶಿವನಿಗೆ ತ್ರಿಶೂಲ, ಬಸವನಿಗೆ ಲಿಂಗ, ವಿಷ್ಣುವಿಗೆ ಶ್ರೀ ಚಕ್ರ, ಇಂತಹ ಕೆಲವು ಮುದ್ರೆಗಳು ತಮ್ಮ ವಿಶೇಷತೆಯನ್ನು ಪಡೆದುಕೊಳ್ಳುವುದಲ್ಲದೆ, ಮುದ್ರೆ ಹಾಗೂ ಅಭಯ ಮುದ್ರೆ ಮುಂತಾದ ರೂಢಿಬದ್ಧ ಚಿನ್ಹೆಗಳು ಬಂದವು.

ಜೈನ ಧರ್ಮದ ಹರಿಕಾರನಾದ ವರ್ಧಮಾನ ಮಹಾವೀರ, ಅಹಿಂಸೆ ಹಾಗೂ ವೈರಾಗ್ಯ ಮಾರ್ಗದ ಮೂಲಕ ಆತ್ಮದ ಮುಕ್ತಿಗೆ ಪ್ರಾಮುಖ್ಯತೆ ಕೊಟ್ಟನು, ಅವನ ಅನುಯಾಯಿಗಳಲ್ಲಿ ಯತಿಗಳು ಅಥವಾ ಸಾಧುಗಳು ಹಾಗೂ ಉಪಾಸಕರು ಮುಂದೆ ಜೈನ ಧರ್ಮದಲ್ಲಿ ಎರಡು ಪಂಗಡಗಳಾದವು, ದಿಂಗಬರರು ಹಾಗೂ ಶ್ವೇತಾಂಬರರು. ಇವೆರಡು ಪಂಗಡಗಳು ತನ್ನದೇ ಆದ ಜೈನಧರ್ಮ ಗ್ರಂಥವನ್ನು ಹೊಂದಿದೆ. ಅಲ್ಲದೆ ಪ್ರತಿ ಪಂಗಡವು ಪ್ರಾದೇಶಿಕ ಭಾಷೆ ಹಾಗೂ ಭಾರತೀಯ ಕಲೆಯ ಬೆಳವಣಿಗೆಗೆ ನೆರವಾಗಿದೆ. ಬುದ್ಧನ ಬೋಧನೆಗಳಿಂದ ಬೌದ್ಧ ಧರ್ಮವು ಬೆಳೆದು ಬಂದಿತು. ಬುದ್ಧನ ದೃಷ್ಟಿಯಲ್ಲಿ ಮುಕ್ತಿ ಮಾರ್ಗದ ವೈರಾಗ್ಯದಿಂದ ಪಡೆಯುವುದಲ್ಲ, ಬದಲಾಗಿ ನಿಗ್ರಹ ಪಡೆಯುವುದು. ಆತ್ಮದ ಮುಕ್ತಿ ನಿರ್ವಾಣ, ಮುಂದೆ ಹೀನಾಯಾನ ಮತ್ತು ಮಹಾಯಾನಗಳೆಂದು ಎರಡು ಪಂಗಡಗಳಾದವು. ಹೀನಾಯಾನವು ಬುದ್ಧನನ್ನು ಮಾನವ ರೂಪದಲ್ಲಿ ಚಿತ್ರಿಸುತ್ತಿರಲಿಲ್ಲ. ಆದರೆ ಮಹಾಯಾನದವರು ಬುದ್ಧನ ವಿಗ್ರಹಗಳನ್ನು ಪೂಜಿಸುತ್ತಿದ್ದರು. ಹೀಗಾಗಿ ಕಲೆಯ ದೃಷ್ಟಿಯಲ್ಲಿ ಬೌದ್ಧ ಧರ್ಮದಲ್ಲಾದ ಈ ವಿಭಜನೆಯು ಬಹಳ ಮುಖ್ಯವಾಗಿದೆ.

ಉತ್ತರ ಭಾರತದಲ್ಲಿ ಆರ್ಯರು ಮೊದಲಿಗೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುತ್ತಿದ್ದ ಕಾಲದಲ್ಲಿ ಈ ಧರ್ಮಗಳು ತಮ್ಮ ಬೆಳವಣಿಗೆಗಳನ್ನು ಕಂಡವು. ಮೌರ್ಯರ ಕಾಲದಲ್ಲಿ ಧಾರ್ಮಿಕ ಕಲೆಗಳು ಪ್ರೌಢ ಹಂತವನ್ನು ತಲುಪಿದವು. ಕ್ರಿ.ಪೂ. ೩೨೬ರಲ್ಲಿ ಅಲೆಕ್ಸಾಂಡರನು ನಡೆಸಿದ ದಂಡಯಾತ್ರೆಯಿಂದ ಎರಡು ರೀತಿ ಸಹಾಯವಾಯಿತು. ಪರ್ಯೂರವ ಮುಂತಾದಂತಹ ಶಕ್ತಿಯುತ ಸಾಮ್ರಾಜ್ಯಗಳನ್ನು ಸೋಲಿಸಿ, ಮಗಧಾರಾಜ್ಯವನ್ನು ಅದರ ಅವಶೇಷಗಳ ಮೇಲೆ ವಿಸ್ತರಿಸಲು ಚಂದ್ರಗುಪ್ತ ಮೌರ್ಯನಿಗೆ ಸುಲಭವಾಗುವಂತೆ ಮಾಡಿದ. ಗ್ರೀಕರು ಪಂಜಾಬ್‌ನಿಂದ ಸಿಂಧ್ ರಾಜ್ಯಗಳನ್ನು ಎಂಟು ವರ್ಷಗಳ ಕಾಲ ಆಳಿದ್ದರೂ, ಅಲೆಕ್ಸಾಂಡರನು ಭಾರತ ಹಾಗೂ ಪಶ್ಚಿಮದ ನಡುವೆ ಸಂಪರ್ಕವನ್ನು ಬಲಪಡಿಸಿದನು.

ಸಾಲೇಕಸ್ ನಿಕ್ಕೇಟೇಟರ್‌ನ ವಿರುದ್ಧ ಹೋರಾಡಿ ಚಂದ್ರಗುಪ್ತ ಮೌರ್ಯನು ಅರಿಯಾ ಹಾಗೂ ಅರಾಕೊಸಿಯವಲ್ಲದೆ ಇಡೀ ಈಶಾನ್ಯ ಭಾರತವನ್ನು ತನ್ನ ಅಧಿಪತ್ಯಕ್ಕೆ ತೆಗೆದುಕೊಂಡನು. ಅವನ ಮಗನಾದ ಬಿಂದುಸಾರನು ಈ ಸಾಮ್ರಾಜ್ಯವನ್ನು ದಕ್ಷಿಣ ಭಾಗದಲ್ಲಿನ ದಕ್ಕನಿನವರೆಗೂ ಹಬ್ಬಿಸಿದನು. ಅಂತೆಯೇ ಅವನ ಮೊಮ್ಮಗನಾದ ಅಶೋಕನು ಕಳಿಂಗನ ವಿರುದ್ಧ ಸಮರವನ್ನು ನಡೆಸಿ, ಯುದ್ಧದಲ್ಲಾಗುವ ಹಿಂಸೆ, ರಕ್ತಪಾತಗಳನ್ನು ಕಂಡು ಮರುಗಿ ಬೌದ್ಧ ಧರ್ಮವನ್ನು ಸ್ವೀಕರಿಸಿದನು. ಜಗತ್ತನ್ನು ಶಸ್ತ್ರಾಸ್ತ್ರಗಳಿಂದಲ್ಲ, ಬದಲಿಗೆ ಧರ್ಮದ ಬೋಧನೆಯಿಂದ ಗೆಲ್ಲಬೇಕೆಂದು ಸಾರಿದನು. ಧರ್ಮವೆಂದರೇನು ಎಂಬುದನ್ನು ಅವನ ಸಾಮ್ರಾಜ್ಯದ ವಿವಿಧ ಬಂಡೆಗಲ್ಲು ಹಾಗೂ ಕಂಬಗಳ ಮೇಲೆ ಬರೆಯಲಾಗಿರುವ ರಾಜ್ಯ ಶಾಸನಗಳ ಮೂಲಕ ತಿಳಿಯಬಹುದು. ಇವುಗಳು ವೇದಕಾಲದ ನಂತರ ಭಾರತೀಯ ಶಿಲ್ಪಕಲೆಯ ಕುರುಹುಗಳಲ್ಲಿ ಮುಖ್ಯವಾಗಿದೆ.

ಅಶೋಕನ ಮರಣದ ನಂತರ ಅವನ ಸಾಮ್ರಾಜ್ಯವೂ ಒಡೆದು ಹೋಯಿತು. ಆಂಧ್ರ, ಕಳಿಂಗ ರಾಜ್ಯಗಳು ತಮ್ಮ ಸ್ವಾಯತ್ತತೆಯನ್ನು ಘೋಷಿಸಿಕೊಂಡರೆ ಮಘದವು ಸುಂಗರ ಅಧಿಪತ್ಯಕ್ಕೆ ಒಳಪಟ್ಟಿತು. ಸುಂಗರ ಅಧಿಪತ್ಯದ ಕೊನೆಯ ಹಂತದಲ್ಲಿ ಹೀನಾಯಾನ ಪಂಗಡದ ಬೌದ್ಧ ಕಲೆಯು ಉತ್ತುಂಗ ತುದಿಯನ್ನು ತಲುಪಿತು. ಇದರಲ್ಲಿ ಮುಖ್ಯವಾಗಿ ಭಾರ್‌ಹುತ್ ಸ್ತೂಪದ ಶಿಲ್ಪಕಲೆ ಹಾಗೂ ಭಾಜು ಕಾರ್ಲಿಗಳಲ್ಲಿನ ಚೈತನ್ಯ ಮಂದಿರದಲ್ಲಿನ ಕೆತ್ತನೆ ಕೆಲಗಳು ಮುಖ್ಯವಾದವು. ಅದೇ ಸಮಯದಲ್ಲಿ ಕೇಂದ್ರ ಹಾಗೂ ದಕ್ಷಿಣ ಭಾರತದಲ್ಲಿ ಆಂಧ್ರರೆಂಬ

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For INDIAN AIRLINES & JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

ಹೊಸದೊಂದು ದ್ರಾವಿಡ ರಾಜವಂಶವು ಕ್ರಿ.ಪೂ. ಒಂದನೆ ಶತಮಾನದಲ್ಲಿ ಹೀನಯಾನದ ಕಲೆಯ ಫಲವಾದ ಸಾಂಚಿಯಲ್ಲಿನ ಸ್ತೂಪ - ೧ನ್ನು ಮುಂದುವರೆಸಿತು.

ಆರಂಭದ ಕ್ರಿಸ್ತಯನ್ನರ ಕಾಲದ ಮೊದಲ ವಿದೇಶಿ ಪ್ರಭುತ್ವವು ಭಾರತದಲ್ಲಿ ಪ್ರಾರಂಭವಾಯಿತು. ಬ್ಯಾಕ್ಟ್ರಿಯಾದ ಸೆಲುಸಿಡ್ ಗ್ರೀಕ್‌ನಿಂದ ಪ್ರಾರಂಭವಾಗಿ ನಂತರ ಸಿಂಥಿಯಾದ ಬುಡಕಟ್ಟು ಜನಾಂಗದವರು ಶಾಕರು ಭಾಗವನ್ನು ಆಕ್ರಮಿಸಿಕೊಂಡರು. ಶಾಕರು ದಕ್ಷಿಣ ಸಿಂಧಿನಲ್ಲಿ ನೆಲೆಗೊಂಡರು. ನಂತರ ಭಾರತದ ಇತಿಹಾಸದಲ್ಲಿ ಕುಶಾನರೆಂದು ಹೆಸರು ಪಡೆದ ಯುಹೆ - ಚಿಗುಳು ಗ್ರೀಕ್ ರಾಜರನ್ನು ಹಾಗೂ ಅವರ ಜನರ ಆದ ಶಾಕರನ್ನು ಸೋಲಿಸಿ ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಸೈಥೊ ಪಾರ್ಥಿಯನ್ ಕಾಲದಲ್ಲಿ ಯೇಸು ಕ್ರಿಸ್ತನ ಹನ್ನೆರಡು ಮುಖ್ಯ ಶಿಷ್ಯರಲ್ಲಿ ಒಬ್ಬನಾದ ಸಂತ ಥಾಮಸ್ಸನು ಭಾರತಕ್ಕೆ ಮೊದಲ ಕ್ರಿಸ್ತಯನ್ನಾಗಿ ಬಂದನು. ಅವನ ಯಾತ್ರೆಯ ಬಗ್ಗೆ ಹಲವಾರು ದಂತ ಕಥೆಗಳು ಇತಿಹಾಸದೊಡನೆ ಸೇರಿಸಲಾಗಿದೆ.

ಕುಶಾನರ ಕಾಲದಲ್ಲಿ ಮಹಾಯಾನ ಭೌದ್ಧರಿಗೆ ರಾಜ್ಯಾಶ್ರಯ ಸಿಕ್ಕಿತ್ತು. ಕಾನಿಷ್ಕ ಹಾಗೂ ಅವನ ಉತ್ತರಾಧಿಕಾರಿಗಳ ಕೆಳಗಿದ್ದ ವಿವಿಧ ಸ್ಥಳಗಳಲ್ಲಿ ಎರಡು ರೀತಿಯ ವಿಶಿಷ್ಟ ಕಲಾಶೈಲಿಗಳು ಬೆಳೆದವು, ಗಾಂಧಾರದ ಗ್ರೀಕ್ ರೋಮನ್ನರ ಶೈಲಿ ಹಾಗೂ ಮಥುರಾದ ಭಾರತೀಯ ಶೈಲಿ (ಕ್ರಿ.ಶ. ೨ನೇ ಶತಮಾನ ನಂತರ) ೪ನೇ ಶತಮಾನದ ಅಂತ್ಯದಲ್ಲಿ ಶ್ವೇತ ಹುಣ್ಣರ ದಾಳಿಯು ಗಾಂಧಾರದಲ್ಲಾಗುತ್ತಿದ್ದ ಕಲಾ ಚಟುವಟಿಕೆಗಳಿಗೆ ಅಂತ್ಯವನ್ನು ತಂದವು. ಆದರೆ ಮಥುರಾದಲ್ಲಿ ಗುಪ್ತಪ ಸಾಮ್ರಾಜ್ಯವು ಮುಂದುವರೆಯಿತು. ಅದೇ ಕಾಲದಲ್ಲಿ ದಖನ್ನಿನಲ್ಲಿದ್ದ ಆಂಧ್ರರು ಭೌದ್ಧ ಕಲೆಯನ್ನು ಪೋಷಿಸಿದರು. ರೋಮನ್ನರು ಬರ್ಮಾ ಹಾಗೂ ಚೀನಾದೊಡನೆ ಸಮುದ್ರದ ಮೂಲಕ ಅವರಿಗೆ ಸಂಪರ್ಕವಿದ್ದರೂ ಅವರ ಕಲೆಯು ಭಾರತೀಯವಾಗಿಯೇ ಉಳಿಯಿತು. ಆದರೆ ಅಮರಾವತಿ ಹಾಗೂ ಇನ್ನಿತರ ಜಾಗಗಳಲ್ಲಿ ಕಂಡುಬರುವ ಪುರಾವೆಗಳು ಉತ್ತರ ಭಾರತದ ಪ್ರಭಾವಗಳಿಗೆ ಒಳಪಟ್ಟಿತ್ತು. ಕ್ರಿ.ಶ. ೪ನೇ ಶತಮಾನದಲ್ಲಿ ಉತ್ತರ ಭಾರತದಲ್ಲಿ ಹೊಸದೊಂದು ಸಾಮ್ರಾಜ್ಯವೊಂದು ಸ್ಥಾಪಿತವಾಯಿತು. ಗುಪ್ತರೆಂದು ರಾಜವಂಶವು ತಲೆಯೆತ್ತಿತು ಮತ್ತು ಇದನ್ನು ಭಾರತದ ಸುವರ್ಣ ಯುಗವೆಂದು ಕರೆಯಲಾಗುತ್ತದೆ. ಕಾರಣವೇನೆಂದರೆ ನಾಲ್ಕನೆ ಹಾಗೂ ಆರನೆ ಶತಮಾನಗಳ ನಡುವವೆ ಉತ್ತರ ಭಾರತವು ಕಲೆ, ಸಾಹಿತ್ಯ, ಚಿತ್ರಕಲೆ, ವಾಸ್ತುಶಿಲ್ಪ ಹಾಗೂ ಸಂಗೀತ ಕಲೆಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಗುಪ್ತರ ಕಾಲದಲ್ಲಿ ಅರಮನೆಯ ರಾಜ್ಯಾಶ್ರಯದಲ್ಲಿ ಹಿಂದೂ ಧರ್ಮವು ಅದರಲ್ಲೂ ಮುಖ್ಯವಾಗಿ ವೈಷ್ಣವ ಪಂಗಡಕ್ಕೆ ಹೊಸದಾದ ಉತ್ತೇಜನ ದೊರೆಯಿತು. ಹಾಗೆಂದ ಪಕ್ಷದಲ್ಲಿ ಭೌದ್ಧ ಧರ್ಮವು ಕಣ್ಮರೆಯಾಗದೆ (ಭೌದ್ಧ ಕಲೆಯು ಮಥುರ, ಸಾರನಾಥ್ ಹಾಗೂ ಅಜಂತ ಗುಹೆಗಳಲ್ಲಿ ಬೆಳೆಯುತ್ತಿತ್ತು) ಭಾರತದ ಇತಿಹಾಸದಲ್ಲಿ ಮೊದಲಿಗೆ ಹಿಂದೂ ದೇವಸ್ಥಾನಗಳನ್ನು ಮರದ ಬದಲಾಗಿ ಕಲ್ಲಿನಲ್ಲಿ ಕಟ್ಟಲಾಯಿತು.

ಗುಪ್ತ ಸಾಮ್ರಾಜ್ಯದ ನಂತರ ಕ್ರಿ.ಶ. ೬೦೦ರಲ್ಲಿ ಭಾರತದ ವಿವಿಧ ಭಾಗಗಳಲ್ಲಿ ರಜಪೂತರು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಕಲೆಯ ದೃಷ್ಟಿಯಿಂದ ಇದು ಮುಖ್ಯವಾಗಿದೆ. ದೇವಸ್ಥಾನಗಳನ್ನು ಕಟ್ಟುವ ಕಾರ್ಯವು ಒರಿಸ್ಸಾದ ಭುವನೇಶ್ವರದಲ್ಲಿ ಪ್ರಾರಂಭವಾಗಿತ್ತು. ಹಾಗೆಯೇ ರಜಪುತಾನ, ಗುಜರಾತುಗಳಲ್ಲಿ ಸೋಲಂಕಿ ರಾಜವಂಶದ ಕೆಳಗೆ ಕಲೆಯು ವಿಕಾಸವನ್ನು ಕಂಡಿತು. ದಕ್ಷಿಣದಲ್ಲಿ ೨ನೇ ಶತಮಾನದಿಂದ ೯ನೇ ಶತಮಾನದವರೆಗೆ ಪಲ್ಲವರಂತಹ ದ್ರಾವಿಡ ರಾಜವಂಶಗಳು ಸ್ಥಾಪಿಸಗೊಂಡವು. ೮ನೇ ಶತಮಾನದವರೆಗೆ ಪಲ್ಲವರಂತಹ ದ್ರಾವಿಡ ರಾಜವಂಶಗಳು ಸ್ಥಾಪಿತಗೊಂಡವು. ೮ನೇ ಶತಮಾನದಿಂದ ೧೦ನೇ ಶತಮಾನದಿಂದ ೧೧ನೇ ಶತಮಾನದ ಮಧ್ಯದವರೆಗೂ ಉತ್ತರದ ಗಂಗೆಯಿಂದ ಹಿಡಿದು ದಕ್ಷಿಣ ಭಾರತವನ್ನೆಲ್ಲಾ ಪ್ರಖ್ಯಾತ ಚೋಳರು ಆಳಿದರು. ಚೋಳರ ವಾಸ್ತು ಕಲಾಶೈಲಿಯ ಪ್ರಭಾವವು ಆಗ್ನೇಯ ಏಷಿಯಾದವರಿಗೂ ಹರಡಿತು. ನಮ್ಮ ರಾಜ್ಯದಲ್ಲಿ ಹೊಯ್ಸಳರು ೧೨-೧೩ನೇ ಶತಮಾನದವರೆಗೂ ದಕ್ಷಿಣ ಹಾಗೂ ಉತ್ತರ ವಾಸ್ತುಶಿಲ್ಪ ಶೈಲಿಗಳಿಂದ ಪ್ರಭಾವಿತವಾದ ವಿಶಿಷ್ಟ ವಾಸ್ತುಶಿಲ್ಪವನ್ನು ಅಭಿವೃದ್ಧಿಗೊಳಿಸಿದರು. ಮುಸಲ್ಮಾನರ ಆಕ್ರಮಣವನ್ನು ಎದುರಿಸಿದ ಕೊನೆಯ ಹಿಂದೂ ಸಾಮ್ರಾಜ್ಯವಾದ ವಿಜಯನಗರ ಸಾಮ್ರಾಜ್ಯವು (೧೪-೧೬ನೇ ಶತಮಾನ) ತಮ್ಮ ರಾಜಧಾನಿಯನ್ನು ಸಮೃದ್ಧ ಸಂಪತ್ತಿನ ಶೈಲಿಯಲ್ಲಿ ಕಟ್ಟಿಕೊಂಡಿದ್ದರು.

ದಕ್ಷಿಣದಲ್ಲಿ ಈ ಹಿಂದೂ ಸಾಮ್ರಾಜ್ಯಗಳು ಅಭಿವೃದ್ಧಿಗೊಳ್ಳುತ್ತಿರುವಾಗ ೮ನೇ ಶತಮಾನದ ನಂತರ ಉತ್ತರವು ಮುಸಲ್ಮಾನರ ಆಕ್ರಮಣವನ್ನು ಮೊಹಮ್ಮದ್ ಬಿನ್ ಕಾಸಿಮ್ ನಡೆಸಿದನು. ಆದರೆ ಈ ಆಕ್ರಮಣವು ಯಾವು ದೀರ್ಘಕಾಲಿಕ ಫಲಗಳನ್ನು ಉಳಿಸಲಿಲ್ಲ. ಆದರೆ ೧೧ ಹಾಗೂ ೧೨ನೇ ಶತಮಾನದಲ್ಲಿ ಮೊದಲು ಗಾಜ್ನಾವಾಡಿ, ನಂತರ ಘೋರಿಗಳು ಆಕ್ರಮಣವನ್ನು ನಡೆಸಿದರು. ೧೨೦೬ರಲ್ಲಿ ಘೋರ ಮಹಮ್ಮದನ ಉತ್ತರಾಧಿಕಾರಿ ದೆಹಲಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ೧೨೦೬ರಿಂದ ೧೫೨೬ರ ಕಾಲವನ್ನು ದೆಹಲಿ ಸುಲ್ತಾನರ ಕಾಲವೆಂದು ಕರೆಯಲಾಗಿದೆ. ಸುಲ್ತಾನರ ಐದು ರಾಜ ವಂಶಗಳು ಒಂದರ ನಂತರ ಒಂದಾಗಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದವು. ಮಾಮ್‌ಲುಕರ್ ಕಾಲ್ಜೀಲು, ತೊಗಲಕರು, ಸಯಿದರು ಹಾಗೂ ಭಾರತೀಯ ಕಲೆಯಲ್ಲಿ ಮುಸಲ್ಮಾನರ ಅಂಶವನ್ನು ಪರಿಚಯಿಸಲಾಯಿತು. ದೆಹಲಿ ಶೈಲಿಯ ವಾಸ್ತುಶಿಲ್ಪವು ಪರದೇಶಗಳ ಮೇಲೆ ಆಧರಿಸಲಾಗಿದ್ದರೂ ಹಿಂದೂ ಕಲೆಯಿಂದ ಪ್ರಭಾವಿತಗೊಂಡು ವಿಶಿಷ್ಟವಾದ ಭಾರತೀಯತೆ ಯನ್ನು ಉಳಿಸಿಕೊಂಡಿತು. ಸ್ಥಳೀಯ ಸುಲ್ತಾನರ ಕಟ್ಟಡಗಳು ದೆಹಲಿ ಶೈಲಿಯನ್ನು ಅನುಸರಿಸುತ್ತಿದ್ದರು.

ಭಾರತೀಯ ಕಲೆ ಹಾಗೂ ವಾಸ್ತುಶಿಲ್ಪಕ್ಕೆ ಹೊಸದೆಂದು ಆಯಾಮವು ಮೊಗಲರ ಕಾಲದಲ್ಲಿ ೧೫೨೬-೧೮೫೭ರಲ್ಲಿ ಪ್ರಾರಂಭವಾಯಿತು. ಮೊಗಲರ ಮೊದಲ ರಾಜರು ಒಳ್ಳೆಯ ಕಲಾ ರಸಿಕರಾಗಿದ್ದರು. ಮೊಗಲರ ಶೈಲಿಯನ್ನು ಕೇವಲ ಅವರ ಕಟ್ಟಡಗಳಲ್ಲಷ್ಟೆ ಅಲ್ಲ, ಅವರಿಂದ ಪ್ರಭಾವಿತಗೊಂಡ ನಂತರದ ಹಿದೂ ಅರಮನೆಯ ಕಟ್ಟಡಗಳಲ್ಲೂ ನಾವು ಕಾಣಬಹುದು. ಮೊಗಲರ ಆರಂಭಿಕ ಕಾಲದ ಜೊತೆಗೆ ಹಿಂದೂ ರಾಜಗೃಹಗಳಲ್ಲಿ ರಜಪೂತರ ಸೂಕ್ಷ್ಮಾಕಾರದ ಚಿತ್ರಕಲೆಯು ಬೆಳೆದು ಬಂದಿತು.

ಭಾರತದಲ್ಲಿ ಚಿತ್ರಕಲೆ ತುಂಬಾ ಪ್ರಾಚೀನ ಕಾಲದಿಂದಲೇ ಸಮೃದ್ಧಗೊಂಡಿದೆ. ಭಾರತದ ಚಿತ್ರದಕಲೆಯನ್ನು ಬಿತ್ತಿ ಚಿತ್ರಗಳು ಮತ್ತು ಚಿಕಣಿ ಚಿತ್ರಗಳೆಂದು ವಿಭಾಗಿಸಬಹುದು. ಎಲ್ಲಾ ಚಿತ್ರಗಳು ಬಣ್ಣ, ನೆಲ ಮತ್ತು ಆಧಾರಗಳನ್ನು ಒಳಗೊಂಡಿವೆ. ಚಿತ್ತಲ್ಲರುವ ವಣದ್ರವ್ಯಗಳು ಬಂಧಕ ವಸ್ತುವಿನ ಅಹತ್ಯತೆಯನ್ನು ಹೊಂದಿವೆ. ಈ ಬಂಧಕಗಳು ಬಣ್ಣವನ್ನು ಉದುರುವುದನ್ನು ಸಂರಕ್ಷಿಸುತ್ತವೆ ಮತ್ತು ತಡೆಯುತ್ತವೆ. ಭಿತ್ತಿ ಚಿತ್ರಗಳಲ್ಲಿ ಬಣ್ಣವು ಹೆಚ್ಚು ಕಾಲ ಬಾಳುವ ಆಧಾರದ ಮೇಲೆ ಹಾಕಲಾಗಿರುವ ಗ್ರೌಂಡ್‌ನ ಮೇಲೆ ತಾನಾಗಿಯೆ ಒಂದುಗೂಡಿಕೊಳ್ಳುತ್ತದೆ. ಸಹಜವಾಗಿಯೇ ಭಿತ್ತಿಚಿತ್ರಗಳು, ಚಿಕಣಿ ಚಿತ್ರಗಳಿಗಿಂತ ದೊಡ್ಡದಾಗಿರುತ್ತವೆ.

## ಅಜಂತ

ಅಜಂತ ಗುಹೆಗಳು ಮಹಾರಾಷ್ಟ್ರದ ಔರಂಗಬಾದ್‌ನಿಂದ ೧೦೭ ಕಿ.ಮೀ. ದೂರವಿದ್ದು, ವಾಘ್ ಕಣಿವೆಯ ಸುಂದರವಾದ ಪ್ರಕೃತಿಯಲ್ಲಿದೆ. ಇಲ್ಲಿರುವ ಚಿತ್ರಗಳು ಕಿ.ಪೂ. ೧ನೇ ಶತಮಾನದಲ್ಲಿ ಪ್ರಾರಂಭವಾಗಿ ಕ್ರಿ.ಶ. ೭ನೇ ಶತಮಾನದವರೆಗೂ ರಚಿತವಾಗಿವೆ. ಶಾತವಾಹನರು, ವಾಕಾಟಿಕರು, ಬಾದಾಮಿಯ ಚಾಲುಕ್ಯ ಅರಸರು ಬೌದ್ಧ ಭಿಕ್ಷುಕರಿಗೆ ಗುಹಾಂತರ ದೇವಾಲಯಗಳನ್ನು ಕಟ್ಟಿಸಿದರು. ಅಜಂತದಲ್ಲಿ ಒಟ್ಟು ೩೦ ಗುಹೆಗಳಿದ್ದು ಅನೇಕ ಗುಹೆಗಳಲ್ಲಿ ಪ್ರಕೃತಿಯ ಪ್ರಕೋಪದಿಂದ ಚಿತ್ರಗಳು ನಾಶವಾಗಿವೆ.

ಬುದ್ಧನ ಸಂದೇಶವನ್ನು ಯಾತ್ರಾರ್ಥಿಗಳಿಗೆ 'ಅರಹುವ' ಸಲುವಾಗಿ ಭಿಕ್ಷುಗಳು ಕಲಾವಿದರನ್ನು ನೇಮಿಸಿಕೊಂಡರು. ಈ ಕಲಾವಿದರು ಗೋಡೆಗಳನ್ನು ಬುದ್ಧನ ಜೀವನದ ಮತ್ತು ಭೋದನೆಯ ದಂತಕಥೆಗಳ ಮೂಲಕ ಅವನ ಜ್ಞಾನ ಉದಾತ್ತ ಗುಣಗಳು, ನಿಸ್ವಾರ್ಥ ಸೇವೆ ಮತ್ತು ಅನುಕಂಪವನ್ನು ತೋರಿಸುತ್ತವೆ. ಕಥೆಗಳು ಬುದ್ಧನಿಗೆ ಸಂಬಂಧ ಪಟ್ಟವಾದರೂ ಕಲಾವಿದರು ಏಕಕಾಲಕ್ಕೆ ತಮ್ಮದೇ ಆದ ಉಡುಗೆ ತೊಡುಗೆಗಳು ಮತ್ತು ಆಸರೆಗಳನ್ನು ಚಿತ್ರಿಸಿದರು. ವಿಶೇಷವಾಗಿ ಅರಮನೆ ಜೀವನದ ವೈಪರೀತ್ಯವನ್ನು ಚಿತ್ರಿಸಿದ್ದಾರೆ. ಅವರು ಜೀವನದ ವಿನೋದ, ದುಃಖ, ಕಷ್ಟಗಳು, ಸರಸಗಳಿಗೂ ಕೂಡ ವಿಮುಖರಾಗಿರಲಿಲ್ಲ. ಅವರ ಕಥೆಗಳ ಮುಖ್ಯ ಕಥಾವಸ್ತುವು, ಬಹು ದೀರ್ಘಬಾಳಿಕೆಯ ಉಪದೇಶಗಳಾಗಿದ್ದವು.

ಚಿತ್ರಗಳು ಗುಹೆಗಳ ಗೋಡೆ ಮತ್ತು ಸೀಲಿಂಗ್‌ಗಳ ಮೇಲಷ್ಟೆ ಇರದೆ, ಏಳನೂರ ವರ್ಷಗಳ ಕಾಲಾವಧಿಯಲ್ಲೂ ಹಾಸುಹೊಕ್ಕಾಗಿವೆ. ಪ್ರಪಂಚದ ಅತ್ಯಂತ ಹಳೆಯದರಲ್ಲಿ ಒಂದಾದ ಹೀನಾಯಾನವು, ಬುದ್ಧನನ್ನು ಬರೀ ಸಂಕೇತಗಳಿಂದ ಅಥವಾ ಜಾತಕ ಕತೆಗಳಲ್ಲಿ ಹೇಳಿರುವ ಹಾಗೂ ಊಹಾ ಪೂರ್ವಜನ್ಮದ ಮೇಲೆ ಪ್ರತಿನಿಧಿಸಲಾಗಿದೆ. ಕ್ರಿ.ಶ. ಐದನೇ ಶತಮಾನದ ಆಸುಪಾಸಿನಲ್ಲಿ 'ಮಹಾಯಾನ'ದ ಪ್ರಭಾವ ಉಂಟಾಯಿತು. ಇದು ತನ್ನೊಂದಿಗೆ ಬುದ್ಧನನ್ನು 'ಮಾನವ' ರೂಪದಲ್ಲಿ ಚಿತ್ರಿಸುವುದನ್ನು ಕಾಣಬಹುದು. ಶಿಲ್ಪದಲ್ಲಿಯೆ ಶೈಲಿ ಮತ್ತು ಗುಹೆಗಳ ಪ್ರಾಮುಖ್ಯತೆ ಎರಡರಲ್ಲಿಯೂ ಕೂಡಾ ಅವನಿಗೆ ಉಂಟಾಯಿತು. ಹೊಸ ವಾಣಿಜ್ಯ ಮಾರ್ಗವು ಗುಹೆಗಳ ಪ್ರಾಮುಖ್ಯತೆ ಕಡಿಮೆಯಾಗುವುದಕ್ಕೆ ಕಾರಣವಾಗಿರಬೇಕು. ಏಳನೆ ಶತಮಾನದ ಮೊದಲ ಅರ್ಧದಲ್ಲಿ ಚೀನಾ ಪ್ರವಾಸಿಗನಾದ ಹ್ಯೂಯೆನ್ ತ್ಸಾಂಗನು ಗುಹೆಗಳನ್ನು ಹೆಸರಿಸುವುದನ್ನು ಬಿಟ್ಟರೆ, ಇತ್ತೀಚೆಗೆ ಕೆಲವು ಸೈನ್ಯಾಧಿಕಾರಿಗಳು, ಹತ್ತೊಂಬತ್ತನೆಯ ಶತಮಾನದ ಆರಂಭದ ವರ್ಷಗಳಲ್ಲಿ ಪುನಃ ಕಂಡು ಹಿಡಿಯುವವರೆಗೆ ಇವುಗಳ ಬಗ್ಗೆ ಹೆಚ್ಚಿನದೇನೂ ಗೊತ್ತಿರಲಿಲ್ಲ. ಗೋಡೆಗಳ ಮೇಲೆ ಭೌದ್ಧಧರ್ಮದ ಮುಖ್ಯ ಉದ್ದೇಶಗಳನ್ನು ಪ್ರತಿನಿಧಿಸುತ್ತಿರುವಾಗ ಅವರುಗಳನ್ನು ನಿಯಮಗಳಿಂದ ನಿಯಂತ್ರಿಸುತ್ತಿದ್ದರಾದರೂ, ಒಳಮಾಳಿಗೆಯ ಮೇಲೆ ತಮ್ಮ ಪ್ರಾರಂಭ ಮತ್ತು ಕಲ್ಪನೆಯನ್ನು ಉಪಯೋಗಿಸುವ ಹೆಚ್ಚಿನ ಸ್ವಾತಂತ್ರ್ಯವಿದ್ದಿತು.

ಈ ಚಿತ್ರಗಳು ಮಾನವನ ಹಾವಳಿ ಪ್ರದೇಶದಿಂದ ದೂರದಲ್ಲಿರುವುದರಿಂದ, ಈ ಚಿತ್ರಗಳು ಮನುಷ್ಯನಿಂದ ದೂರವಾಗಿ ಉತ್ತಮವಾಗಿ ಸಂರಕ್ಷಿಸಲ್ಪಟ್ಟಿವೆ. ದುರಾದೃಷ್ಟವಶಾತ್, ತಂತ್ರದಲ್ಲಿನ ಕೆಲವು ದೋಷಗಳು ಮತ್ತು ಕಾಲನ ಹಾವಳಿಗಳು ಅವುಗಳ ಶಿಥಿಲಾವಸ್ಥೆಗೆ ಕಾರಣವಾಗಿವೆ. ಅವುಗಳನ್ನು ರಕ್ಷಿಸಬಹುದಾದ ಮಾರ್ಗವನ್ನು ಹುಡುಕಲು ಶಿಲ್ಪಾಶಾಸ್ತ್ರಜ್ಞರು ಅವುಗಳ ತಂತ್ರದ ಬಗ್ಗೆ ತುಂಬಾ ವಿವರವಾಗಿ ಅಧ್ಯಯಾನ ಮಾಡಿದ್ದಾರೆ. ಅಜಂತಾ ಚಿತ್ರಗಳ ಮಾಧ್ಯಮವು ಟೆಂಪರಾ ಆಗಿದೆ. ಚಿತ್ರದ ಹೊರರೇಖೆಗಳನ್ನು ಮೊದಲು ಕಂದು ಬಣ್ಣದಲ್ಲಿ ಬರೆದು, ಅನಂತರ ಬಣ್ಣಗಳನ್ನು ಹಾಕುತ್ತಿದ್ದರು. ಹಾಗೂ ಬಾಹ್ಯ ರೇಖೆಗಳನ್ನು ಕಂದು, ಕಂದುಕೆಂಪು ಅಥವಾ ಕಪ್ಪು ಬಣ್ಣದಿಂದ ರಚಿಸುತ್ತಿದ್ದರು. ವರ್ಣದ್ರವ್ಯಗಳನ್ನು ಮುಖ್ಯವಾಗಿ ಸ್ಥಳೀಯ ಬಂಡೆಗಳಿಂದ ಪಡೆಯುತ್ತಿದ್ದರು.

ಅಜಂತಾದ ಚಿತ್ರಗಳಲ್ಲಿ ಗುಹೆ ಸಂಖ್ಯೆ ೯ ಮತ್ತು ೧೦ರಲಿಲಿ ಬೌದ್ಧ ಮಹಾಯಾನರ ಅಡಿಯಲ್ಲಾದ ಚಿತ್ರಗಳ ಹೊರರೇಖೆಗಳು ಎದ್ದು ಕಾಣುವುದಿಲ್ಲ. ಬೌದ್ಧ ಮಹಾಯಾನರ ಅಡಿಯಲ್ಲಿ ಕಲಾವಿದರು ತಾವು ಏನನ್ನೇ ಸೃಷ್ಟಿಸಲಿ ಅದರಲ್ಲಿ ಪರಿಪೂರ್ಣತೆ ಸಾಧಿಸುವ ಬಯಕೆಯನ್ನು ಹೊಂದಿದ್ದರು. ಕಣ್ಣಿಗೆ ಕಾಣುವ ಬಣ್ಣಗಳ ಕಲೆಗಳಿಂದ ಮುಖಭಾವವನ್ನು ಪ್ರದ್ಯುಸುವಂತೆ ಮಾಡುತ್ತಿದ್ದರು. ಅಲ್ಲದೆ ಮಾನವ ಮತ್ತು ಪ್ರಾಣಿಗಳ ರೂಪಗಳು ಅನೇಕ ತರಹದ ರಮ್ಯವಾದ ಭಂಗಿಗಳನ್ನು ತೋರಿಸತ್ತವೆ. ಚಿತ್ರದ ಹಿನ್ನಲೆಗೆ ಕಡು ಬಣ್ಣಗಳನ್ನು ಮತ್ತು ಕೆಲವು ಸಂದರ್ಭಗಳಲ್ಲಿ ಬಣ್ಣಗಳು ಇನ್ನಷ್ಟು ತೀವ್ರವಾಗಿರುವಂತೆ ಮಾಡಲು ಅವರು ಕಪ್ಪು ಚುಕ್ಕೆಗಳನ್ನು ಉಪಯೋಗಿಸಿದ್ದಾರೆ. ಕೃಶವಾದ ಭಂಗಿಗಳು, ಕೌಶಲ್ಯಪೂರ್ಣ ಕೀಲುಗಳು ಮತ್ತು ಕಲಾತ್ಮಕ ಅಂಶಗಳಿಂದ ಅಜಂತಾದ ಚಿತ್ರಗಳು ಅಮರಾವತಿಯ ಶಿಲ್ಪಗಳೊಂದಿಗೆ ಹತ್ತಿರದ ಸಾಮ್ಯತೆಗಳನ್ನು ಹೊಂದಿದೆ. ಅಜಂತಾದ ಚಿತ್ರಗಳು ಅನೇಕ ರೀತಿಯ ಕೇಶ ವಿನ್ಯಾಸವನ್ನು ಹೊಂದಿದೆ. ಈ ಕೇಶವಿನ್ಯಾಸವು ಸರಳವಾದ್ದರಿಂದ ಹಿಡಿದು ಬೇರೆ ಬೇರೆ ರೀತಿಗಳನ್ನು ಹೊಂದಿದೆ. ಕೇಶವನ್ನು ಮುತ್ತಿನ ದಂಡೆಗಳು ಮತ್ತು ವಿವಿಧ ಚಿನ್ನದ ಅಭರಣಗಳಿಂದ ಅಲಂಕರಿಸಲ್ಪಟ್ಟಿವೆ.

ಶಾತವಾಹನ ರಾಜರುಗಳ ಪ್ರೋತ್ಸಾಹದಿಂದ ೯ ಮತ್ತು ೧೦ರಲ್ಲಿನ ಚಿತ್ರಗಳು ಅತ್ಯಂತ ಪ್ರಾಚೀನ ಚಿತ್ರಗಳಾಗಿವೆ. ಹೀನಾಯಾನ ಹಂತದ ಅವಧಿಯಲ್ಲಿ ಶೋಧನೆ ಮಾಡಲಾದ ಈ ಗುಹೆಗಳನ್ನು 'ಚೈತ್ಯ'ಗಳೆಂದು ಕರೆಯಲಾಗುತ್ತಿತ್ತು. ಹೂವಿನ ಮತ್ತು ಪ್ರಾಣಿಗಳ ಆಕಾರಗಳ ದೃಷ್ಟಾಂತಗಳಾದ ಜಾತಕ ಕಥೆಗಳು ಮತ್ತು ಜೀವನದಿಂದ ವಿವರಿಸಲಾಗುವ ಚಿತ್ರಗಳು, ಗೋಡೆ ಕಂಬಗಳು ಮತ್ತು ಸೀಲಿಂಗ್‌ಗಳ ಮೇಲೆಲ್ಲಾ ಇವೆ ಹಾಗೂ ಇವುಗಳ ಶೈಲಿ ಅತ್ಯಂತ ಉನ್ನತ ಮಟ್ಟದಲ್ಲಿದೆ. ಅಜಂತಾದ ಚೈತ್ಯ ೯ರಲ್ಲಿ ಎಡೆ ಗೋಡೆಗಳ ಮೇಲೆ ಸ್ತೂಪದ ಕಡೆಗೆ ಹೋಗುತ್ತಿರುವ ಭಕ್ತರ ಗುಂಪೊಂದನ್ನು ಚಿತ್ರಿಸಲಾಗಿದೆ. ಚಿತ್ರಗಳಲ್ಲಿ ಚಲನೆಯನ್ನು ಸಂಪರ್ಕವಾಗಿ ಬಿಂಬಿಸಲಾಗಿದೆ ಮತ್ತು ಅವರ ಆಭರಣಗಳ ವಿನ್ಯಾಸ, ಬಟ್ಟೆಗಳ ಮಡಿಕೆಗಳನ್ನು ಕಲಾತ್ಮಕವಾಗಿ ಬಿಂಬಿಸಲಾಗಿದೆ. ರಾಜನ ಆಸ್ಥಾನದ ಬಲ ಭಾಗದಲ್ಲಿರುವ ತೋರಣದ ಸಮೀಪ ವಿವಿಧ ವಾದ್ಯಗಳನ್ನು ಬಾರಿಸುತ್ತಿರುವ ಸಂಗೀತಗಾರರನ್ನು ಕಾಣಬಹುದು. ಬುದ್ಧನು ಪೂರ್ವ ಜನ್ಮದಲ್ಲಿ ಆನೆಯ ಅವತಾರದಲ್ಲಿದ್ದನೆಂಬ ಜಾತಕ ಕತೆಯಾಗಿದ್ದು, ಕತೆಯ ಪ್ರಕಾರ ತನ್ನ ಪೂರ್ವ ಅವತಾರವೊಂದರಲ್ಲಿ ಬುದ್ಧನು ಆರು ದಂತಗಳ ಬೃಹತ್ತಾದ ಆನೆಯಾಗಿದ್ದನು. ಅವನ ಇಬ್ಬರು ಹೆಂಡತಿಯರಾದ ಮಹಾಶುಭದ್ರ ಮತ್ತು ಚುಲ್ಲಾ ಶುಭದ್ರರ ಜೊತೆ, ದಡದಲ್ಲಿ ದಟ್ಟವಾದ ಕಾಡಿನ ತಾವರೆಕೊಳದ ಸಮೀಪದ ಒಂದು ಗುಹೆಯಲ್ಲಿ ಅವನು ವಾಸವಾಗಿದ್ದನು. ಸಾಲು ಮರಗಳ ತೋಪು ಸಂಪೂರ್ಣವಾಗಿ ಅರಳಿದೆ ಎಂಬುದನ್ನು ಕೇಳಿ, ತನ್ನ ಪತ್ನಿಯರೊಂದಿಗೆ ಅಲ್ಲಿಗೆ ಹೋಗಿ ಉತ್ಸಾಹದಿಂದ ಮರದ ಕೊಂಬೆಗಳನ್ನು ಅಲುಗಾಡಿಸಿದನು. ಮಹಾ ಶುಭದ್ರಳ ಮೇಲೆ ಹೂವುಗಳು ಮತ್ತು ಎಲೆಗಳ ವೃಷ್ಟಿಯಾದರೆ ಚುಲ್ಲಾ ಶುಭದ್ರಳ ಮೇಲೆ ಬರೀ ಒಣಗಿದ ತೊಟ್ಟುಗಳು ಸುರಿಯಲ್ಪಟ್ಟವೆ.

ಈ ಭಿತ್ತಿ ಚಿತ್ರಗಳಲ್ಲಿ ಅರಣ್ಯದ ಪ್ರಸಂಗಗಳು ಮತ್ತು ರಾಜನ ಆಸ್ಥಾನದ ಪ್ರಸಂಗಗಳನ್ನು ಪ್ರತ್ಯೇಕವಾಗಿ ಚಿತ್ರಿಸಲಾಗಿದೆ. ಎರಡನೆಯ ಕಂಬದಿಂದ ಹನ್ನೆರಡನೆಯ

ಕಂಬದವರೆಗೆ ಹಿಂಭಾಗದಲ್ಲಿ, ಬಲಭಾಗದ ಮೇಲೆ ಬೇರೆ ಬೇರೆ ದೃಶ್ಯಗಳು ಇವೆ. ಮೊದಲನೆಯ ದೃಶ್ಯವು ತಮ್ಮ ಅರಣ್ಯದ ವಾಸಸ್ಥಾನದಲ್ಲಿರುವ ಆನೆಗಳ ಗುಂಪೊಂದನ್ನು ತೋರಿಸುತ್ತದೆ. ಎಡಭಾಗದ ತುತ್ತ ತುದಿಯಲ್ಲಿ ಮರಕ್ಕೆ ಸ್ವಲ್ಪ ಮಾತ್ರ ಸುತ್ತಿಕೊಂಡಿರುವ ಹೆಬ್ಬಾವು ತನ್ನ ಸುರುಳಿಯಲ್ಲಿ ಆನೆಯೊಂದರ ಹಿಂಗಾಲನ್ನು ಹಿಡಿದುಕೊಂಡಿದೆ. ಈ ಆನೆಯು ಹೆಬ್ಬಾವಿನ ಸುರುಳಿ ಬಂದನದಿಂದ ಪಾರಾಗಿ ಸ್ವತಂತ್ರವಾಗಲು ಯತ್ನಿಸುತ್ತಿದ್ದರೆ, ಇಂತಹ ಹಲವು ಆನೆಗಳು ಇದಕ್ಕೆ ಸಹಾಯ ಮಾಡಲು ಮುಂದಕ್ಕೆ ಬಂದಿದೆ. ಮತ್ತೊಂದು ಆನೆಯು ಮೊಸಲೆಯೊಂದನ್ನು ಕಾಲಿನಿಂದ ತುಳಿದು ಸಾಯಿಸಿದೆ. ಬಲಭಾಗದಲ್ಲಿ ಮುಂದಕ್ಕೆ ಆನೆ ಮತ್ತು ಬಿಳಿ ಚರ್ಮವಿದೆ. ಈ ಆನೆಯ ಮೇಲೆ ಹೂವಿನ ದಳಗಳು ಬಿದ್ದುದನ್ನು ತೋರಿಸಲು ಸ್ಪಷ್ಟವಾದ ಗುಲಾಬಿ ಬಣ್ಣದ ಮಚ್ಚೆಗಳಿವೆ. ಇಲ್ಲಿಆನೆಯು ದೊಡ್ಡ ಪ್ರಮಾಣದ ಅಳತೆಯಲ್ಲಿದ್ದು, ಅದರ ಆಕಾರವನ್ನು ಅತ್ಯಂತ ಆಕರ್ಷಕವಾಗಿ ಬರೆಯಲಾಗಿದೆ. ಅದರ ನೆಟ್ಟಗಿರುವ ಬಾಲ ಮತ್ತು ಅದರ ಮುಂದಿರುವ ಎರಡು ಸಹಾಯಕ ಆನೆಗಳು ಎತ್ತಿರುವ ಸೊಂಡಿಲುಗಳು ಏನೋ ಅಪಾಯದ ಸೂಚನೆಯನ್ನು ತೋರಿಸುತ್ತಿವೆ ಮತ್ತು ಇವುಗಳನ್ನು ಚಿತ್ರಿಸುವುದರಲ್ಲಿ ಕಲಾವಿದರು ಪಡೆದಿದ್ದ ಕಲಾತ್ಮಕ ಕೌಶಲ್ಯವನ್ನು ತೋರಿಸುತ್ತದೆ.

ಬಲಭಾಗದಲ್ಲಿ ಇನ್ನು ಮುಂದಕ್ಕೆ ಆನೆಗಳ ಮತ್ತೊಂದು ಗುಂಪು, ತಮ್ಮ ನಾಯಕನೊಂದಿಗೆ ತಾವರೆಯ ಸರೋವರದಲ್ಲಿ ಸ್ನಾನ ಮಾಡುತ್ತಿರುವ ದೃಶ್ಯವಿದೆ. ಸಹಾಯಕ ಆನೆಯೊಂದು ಭೋಧಿಸತ್ವನಿಗೆ ತಾವರೆಯ ಹೂವನ್ನು ಕಾಣಿಕೆಯಾಗಿ ಕೊಟ್ಟಿತು. ಅದರ ಪುಷ್ಪ ರೇಣುಗಳನ್ನು ತನ್ನ ತಲೆಯ ಮೇಲೆಯೇ ಚಿಮುಕಿಸಿಕೊಂಡ ಮೇಲೆ ಮಹಾ ಶುಭದ್ದನಿಗೆ ನೀಡಿತು. ಈ ಸರೋವರ ದೃಶ್ಯವು, ಆನೆಗಳನ್ನು ವಿವಿಧ ಭಂಗಿಗಳಲ್ಲಿ ಜೀವಕ್ಕೆ ಹತ್ತಿರವಿರುವಂತೆ ಚಿತ್ರಿಸಿರುವ ರೀತಿ ಕಲಾವಿದನ ಅದ್ಭುತ ಕೌಶಲ್ಯವನ್ನು ತೋರಿಸುತ್ತದೆ. ಆನೆಗಳ ಚಿತ್ರಗಳ ನಂತರ ಅರಮನೆಯ ದೃಶ್ಯ ಜೋಡಣೆಯ ಚಿತ್ರಗಳಿವೆ. ಈ ಚಿತ್ರಗಳಲ್ಲಿ ರಾಣಿಯೂ ರಾಜನನ್ನು ದಂತವನ್ನು ಕೇಳುತ್ತಿದ್ದು, ರಾಜನು ಬೇಟೆಗಾರರಿಗೆ ದಂತಗಳನ್ನು ತರಲು ಆಜ್ಞೆ ಮಾಡುತ್ತಿರುವುದನ್ನು ಕಾಣುತ್ತೇವೆ. ಮುಂದಿನ ದೃಶ್ಯವು ಬೇಟೆಗಾರರು ವಾಪಾಸ್ಸಾಗುತ್ತಿರುವುದನ್ನು ಮತ್ತು ರಾಣಿಯು ತೀವ್ರ ಪರಿತಾಪದಿಂದ ಮೃತಳಾಗುತ್ತಿರುವುದನ್ನು ತೋರಿಸುತ್ತದೆ. ಕೊನೆಯ ದೃಶ್ಯದಲ್ಲಿ ರಾಜ ಮತ್ತು ರಾಣಿ ತಮ್ಮ ಸಹಾಯಕರೊಡನೆ ವಿಹಾರವೊಂದರಲ್ಲಿ ಪೂಜೆಗೆ ಮೆರವಣಿಗೆಯಲ್ಲಿ ಹೋಗುತ್ತಿರುವುದನ್ನು ನೋಡುತ್ತೇವೆ.

ಗುಹೆ ಸಂಖ್ಯೆ ೧೦ರಲ್ಲಿ ಶ್ಯಾಮ ಜಾತಕವು ತನ್ನ ಹಿಂದಿನ ಅವತಾರದಲ್ಲಿ ಶ್ಯಾಮನಾಗಿದ್ದ ಬೋಧಿಸತ್ವನು ಅಂಧರಾದ ಅವನ ತಂದೆ ತಾಯಿಗಳ ಬಗ್ಗೆ ಹೊಂದಿದ್ದ ಪ್ರೀತಿಯನ್ನು ತೋರಿಸುತ್ತದೆ. ಇದು ಕೂಡಾ ಹೀನಾಯಾನ ಅವಧಿಗೆ ಸೇರಿದ್ದಾಗಿದೆ. ಇಲ್ಲಿ ವಿಶೇಷವಾದ ಪೇಟಾವನ್ನು ಧರಿಸಿ ಬಿಲ್ಲುಗಳನ್ನು ಆಯುಧಗಳನ್ನು ಹೊಂದಿರುವ, ಹತ್ತು ಜನ ಸಹಾಯಕರೊಡನೆ, ವಾರಣಾಸಿಯ ರಾಜನು ಇರುವುದನ್ನು ತೋರಿಸುತ್ತದೆ. ಅವರಲ್ಲಿ ಮೂರು ಜನ ಸಹಾಯಕರು ಅಪರೂಪದ ಆಕಾರದ ಘೇಂಡಾಮೃಗ ಚರ್ಮದ ಡಾಲುಗಳನ್ನು ಹೊಂದಿದ್ದಾರೆ. ರಾಜನ ಕುದುರೆಯ ಅವನನ್ನು ಹಿಂಬಾಲಿಸುತ್ತಿದೆ. ಬಿಲ್ಲನ್ನು ಎಳೆದಿರುವ ರಾಜನ ಭಂಗಿಯನ್ನು ಬಹಳ ಬುದ್ಧಿವಂತಿಕೆಯಿಂದ ಕೌಶಲ್ಯಪೂರ್ಣವಾಗಿ ಚಿತ್ರಿಸಲಾಗಿದೆ. ಬಲಭಾಗದಲ್ಲಿ ಎರಡು ಬಾಳೇ ಗಿಡಗಳಿವೆ. ಈ ಎರಡರಲ್ಲಿ ಒಂದು ಬಾಳೆ ಗಿಡದ ಮೇಲಿನಿಂದ ಒಂದು ಪುರುಷಾಕೃತಿಯ ರಾಜನಿಗೆ ಕೊಲ್ಲದಿರುವಂತೆ ಸೂಚನೆ ನೀಡುತ್ತಿದೆ. ನಿಸ್ಸಂದೇಹವಾಗಿಯೂ ಈ ಪುರುಷಾಕೃತಿಯು ಅರಣ್ಯ ಚೇತನವಾಗಿದೆ.

ಈ ಧಾರ್ಮಿಕ ವಿಷಯಗಳ ಕಾರ್ಯ ನಿರ್ವಹಣೆಯ ಮೇಲೆ ಪ್ರಾಚೀನ ಭಾರತೀಯ ಗ್ರಂಥಗಳಲ್ಲಿನ ಚಿತ್ರ ಮತ್ತು ಸೌಂದರ್ಯ ಶಾಸ್ತ್ರಗಳ ಬಗ್ಗೆ ಹೇಳಿರುವ ಎಲ್ಲಾ ನಿಯಮಗಳನ್ನು ಪಾಲಿಸಿರುವ ಇವುಗಳಲ್ಲಿ ಹೆಚ್ಚಿನ ಮಟ್ಟದ ತಾಂತ್ರಿಕ ಕೌಶಲ್ಯವು ಕಂಡು ಬರುತ್ತದೆ. ಚಿತ್ರದಲ್ಲಿನ ರೇಖೆ ಮತ್ತು ಕುಂಚದ ಪರಿಪೂರ್ಣತೆಯ ಶೃಂಗವನ್ನು ತಲುಪಿದ್ದು ರೇಖೆಗಳು ದೃಢವಾಗಿರುವುದನ್ನು ಕಾಣಬಹುದು. ಇದು ಎಲ್ಲಾ ಚಿತ್ರಗಳ ಮೂಲಭೂತ ಅಂಶವಾಗಿದೆ. ರಮ್ಯವಾದ ಹೊರ ರೇಖೆಗಳನ್ನು ಕೌಶಲ್ಯತೆಯಿಂದ ಕೂಡಿರುವ ಹೊಡೆತಗಳು ಮತ್ತು ಮೂರು ಆಯಾಮವನ್ನುಂಟು ಮಾಡುವ ದೃಶ್ಯ ಛಾಯೆಯ ನಿಯಮಗಳನ್ನು ಒಂದೇ ಬಣ್ಣದ ಸೂಕ್ಷ್ಮ ಏರಿಳಿತಗಳಿಂದ ಹಾಗೂ ಮೂಗು, ಕಣ್ಣು ರೆಪ್ಪೆ, ತುಟಿ ಮತ್ತು ಗಲ್ಲದ ಕೆಳಗಿನ ಭಾಗವನ್ನು ಪ್ರಜ್ವಲವಿರುವಂತೆ ಮಾಡಿ, ಚಿತ್ರಗಳು ಜೀವ ಕಳೆಯಿಂದ ಕೂಡಿರುವಂತೆ ಮಾಡಿದ್ದಾರೆ. ನಿಯಮಿತವಾದ ವರ್ಣಗಳಿಂದ ಛಾಯೆಯಿಂದ ವಿವಿಧತೆಯನ್ನು ಸಾಧಿಸಲಾಗಿದೆ. ಬಾಗಿರುವ ಹುಬ್ಬುಗಳು ಉದ್ದವಾದ ಬಾದಾಮಿಯಾಕಾರದ ಕಣ್ಣುಗಳು, ಉದ್ದವಾದ ಮೂಗುಗಳು, ಪೂರ್ಣ ತುಟಿಗಳು, ಪುರುಷ ಮತ್ತು ಸ್ತ್ರೀ ಚಿತ್ರಗಳ ಸೌಂದರ್ಯದ ಸಾಂಪ್ರದಾಯಿಕ ಮಾಪಕಗಳಿಗೆ ಸರಿ ಹೊಂದುವಂತೆ, ಭಂಗಿಗಳಲ್ಲಿನ ಸೂಕ್ಷ್ಮ ವ್ಯತ್ಯಾಸ, ದೃಷ್ಟಿ ಮತ್ತು ಮುಖ ದಿಕ್ಕುಗಳು ವೈವಿಧ್ಯತೆಯನ್ನು ಉಂಟು ಮಾಡಿವೆ. ಆಶ್ಚರ್ಯವಾದದ್ದೆಂದರೆ, ಈ ವೈವಿಧ್ಯತೆಯು ಏಕತಾನತೆ ಮತ್ತು ಸ್ಪಷ್ಟತೆ ಎರಡರಿಂದಲೂ ಮುಕ್ತವಾಗಿದೆ.

ಕಲಾವಿದರು ಕಥೆ ಹೇಳುವುದರಲ್ಲಿ ಸಂತೋಷ ಹೊಂದುವಂತೆ ಹಾಗೂ ಪ್ರಸಂಗಗಳಿಗೆ ಒಂದು ಸಮಕಾಲೀನತೆಯನ್ನು ತರುವಲ್ಲಿ ಯಶಸ್ವಿಯಾಗಿದ್ದಾರೆ. ಅಜಂತಾದ ಚಿತ್ರಗಳು ಆ ಕಾಲದ ಜೀವನದ ವಿಶಾಲವಾದ ಮತ್ತು ಉತ್ಸಾಹದಿಂದ ಕೂಡಿರುವ ಶೋಭೆಯಿಂದ ರಾಜ ಮತ್ತು ರಾಣಿಯರು, ನೃತ್ಯ ಮಾಡುವವರು, ಸಂಗೀತಗಾರರು, ಬೇಟೆಗಾರರು, ವ್ಯಾಪಾರಸ್ಥರು, ಎಲ್ಲಾ ವೃತ್ತಿಗಳ ಜನರು, ದಿನನಿತ್ಯ ಜೀವನದಿಂದ ಚಿತ್ರಸಲಾಗಿರುವ ದೃಶ್ಯಗಳು, ಧಾರ್ಮಿಕ ವಿಧಿಗಳು ಮತ್ತು ಸಮಕಾಲೀನ ಜೀವನ ಮತ್ತು ಪದ್ಧತಿಯನ್ನು ನಿಷ್ಠೆಯಿಂದ ಪ್ರತಿನಿಧಿಸುತ್ತವೆ. ಕಲಾವಿದರು ಲೌಕಿಕ ವ್ಯವಹಾರಗಳಲ್ಲಿ ಕುತೂಹಲಕರ ಆಸಕ್ತಿ ಹಾಗೂ ಪ್ರಕೃತಿನ್ನು ಆನಂದದಿಂದ ಮೆಚ್ಚುವ ಸ್ವಭಾವವನ್ನು ಹೊಂದಿದ್ದರು. ಪ್ರಾಣಿಗಳು, ಪಕ್ಷಿಗಳು, ಮರಗಳು ಮತ್ತು ಹೂವುಗಳನ್ನು ಅವುಗಳ ರಚನೆಯ ಸೌಂದರ್ಯದ ಕಡೆಗೆ ಕಣ್ಣಿಟ್ಟು ಆಕರ್ಷಕವಾಗಿ ಚಿತ್ರಿಸಲಾಗಿದೆ. ಈ ಕಾರಣದಿಂದ ಇವುಗಳನ್ನು ನೋಡುವುದು ಆನಂದ ತರುವ ಸಂಗತಿಯಾಗಿದೆ. ಗಂಧರ್ವರು, ಕಿನ್ನರರು, ಮೀನಿನ ಬಾಲವಿರುವ ಪ್ರಾಣಿಗಳು ಮತ್ತು ದಂತಕಥೆಯಲ್ಲಿ ಬರುವ ಹಕ್ಕಿಗಳು, ಭೂಲೋಕ ಜೀವನದೊಂದಿಗೆ ಯಾವುದೇ ನಿರ್ಬಂಧವಿಲ್ಲದೆ ಕೂಡಿಕೊಂಡಿವೆ. ಇಂತಹ ಆಕರ್ಷಕವಾದ ವಾಸ್ತವಿಕ ಮತ್ತು ಕಾಲ್ಪನಿಕ ಜೀವಿಗಳ ನಡುವೆ ದಯಾಳು ಬುದ್ಧ ಮತ್ತು ಔದಾರ್ಯ ಸ್ವಭಾವದ ಬೋಧಿಸತ್ವರು ತಮ್ಮ ತಮ್ಮ ಕರ್ತವ್ಯಗಳನ್ನು ಸಲ್ಲಿಸುತ್ತಿದ್ದಾರೆ. ಕಲಾವಿದನ ಮೇಧಾವಿತನವು ದೃಶ್ಯಗಳಿಗೆ ಒಂದು ಪ್ರಶಾಂತತೆಯನ್ನು ಉಂಟು ಮಾಡುವುದರ ಜೊತೆಗೆ ಬುದ್ಧನ ಪೂಜೆಗೆ ಸ್ಫೂರ್ತಿಯನ್ನು ನೀಡುತ್ತದೆ. ಈ ಆಕರ್ಷಕವಾದ ಚಿತ್ರಗಳು ಕಲಾವಿದನ ಹೆಸರು ಮತ್ತು ಚರಿತ್ರೆ, ಇಲ್ಲವಾದರೂ, ಮಾಸುತ್ತಿರುವ ಚಿತ್ರಗಳು ಅದು ಉಳಿದಿರುವವರೆಗೂ ಆ ಕಲಾವಿದರ ಮೇಧಾವಿತನ ಮತ್ತು ಕೌಶಲ್ಯವನ್ನು ಅತ್ಯಂತ ಉಚ್ಛ್ರಾಯವಾದ ರೀತಿಯಲ್ಲಿ ಹೇಳುತ್ತಿರುತ್ತವೆ.

ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ
ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು

# GANDHI ON TRUSTEESHIP

**In the present day context, when the world over there is violence, hated, erosion of values, lack of love, perhaps brute force is no answer. The Gandhian way of love in the place of hate and soul force against the brute force perhaps could lead us towards peace and understanding.**

**Gandhi dreamt of a society based on human values, non violence and equality. In this pursuit, his views covered vast areas. They were at times unconventional and lead to a lot of controversy. But Gandhi had a great conviction in these views.**

**After we got independence, we chose different ways to establish a new social order in our country. Looking back at some of Gandhi's writings today should make all of us ponder. We bring in Nesaru a series of writings of Gandhi on various topics beginning with his view on Trusteeship.**

### Theory of Trusteeship

Supposing I have come by a fair amount of wealth-either by way of legacy, or by means of trade and industry - I must know that all that wealth does not belong to me; what belongs to me is the right to an honourable livelihood, no better than that enjoyed by millions of others. The rest of my wealth belongs to the community and must be used for the welfare of the community. I enunciated this theory when the socialist theory was placed before the country in respect to the possessions held by zamindars and ruling chiefs. They would do away with these privileged classes. I want them to outgrow their greed and sense of possession, and to come down in spite of their wealth to the level of those who earn their bread by labour. The labourer has to realize that the wealthy man is less owner of his wealth than the labourer is owner of his own, viz., the power to work.

The question how many can be real trustees according to this definition is beside the point. If the theory is true, it is immaterial whether many live up to it or only one man lives up to it. The question is of conviction. If you accept the principle of Ahimsa, you have to strive to live up to it, no matter whether you succeed or fail. There is nothing in this theory which can be said to be beyond the grasp of intellect, though you may say it is difficult of practice.

Harijan, 3-6-1939, p. 145

I am not ashamed to own that many capitalists are friendly towards me and do not fear me. They know that I desire to end capitalism, almost, if not quite, as much as the most advanced Socialist or even Communist. But our methods differ, our languages differ. My theory of trusteeship is no makeshift, certainly no camouflage. I am confident that it will survive all other theories. It has the sanction of philosophy and religion behind it .... No other theory is compatible with non-violence.

Harijan, 16-12-199, p. 376

### The Problem of the Rich

(Pierre Ceresole Founder President of the International Voluntary Service, during his visit of India in 1935, expressed before Gandhi some of his doubts about capitalism and non-violence as follows:)

"Could one lay down a rule of life for the wealthy? That is to say, could one define how much belongs to the rich and how much does not belong to them?"

"Yes," said Gandhiji, smiling. "Let the rich man take 5 per cent, or 10 per cent, or 15 per cent."

"But not 85 per cent?"

"Ah! I was thinking of going up to 25 per cent! But not even an exploiter must think of taking 85 per cent!".

Pierre Ceresole's tangible difficulty was how long one should wait in order to carry conviction to the rich man.

"That is where I disagree with the Communist," said Gandhiji. "With me the ultimate test is non-violence. We have always to remember that even we were one day in the same position as the wealthy man. It has not been an easy process with us and as we bore with ourselves, even so should we bear with others. Besides, I have no right to assume that I am right and he is wrong. I have to wait until I convert him to my point of view. In the meanwhile if he says, 'I am prepared to keep for myself 5 per cent and to give 75 per cent to charities,' I close with the offer. For I know that 75 per cent voluntarily given is better than 100 per cent surrendered at the point of bayonet, and by this being satisfied with 75 per cent I render unto Caesar the things that are Caesar's. Non-violence must be the common factor between us.

"You may argue that a man who surrenders by compulsion today will voluntarily accept the position tomorrow. That, to my mind, is a remote possibility on which I should not care to build much. What is certain is that if I use violence today, I shall be doubtless faced with greater violence. With non-violence as the rule, life will no doubt be a series of compromises. But it is better than an endless series of clashes/"

"How would you in a word describe the rich man's legitimate position?".

"That of a trustee, I know a number of friends who earn and spend for the poor and who do not regard themselves as anything but trustees of their wealth."

"I too have a number of friends wealthy and poor. I do not possess wealth but accept money from my wealthy friends. How can I justify myself?".

"You will accept nothing for yourself personally. That is to say, you will not accept a cheque to go to Switzerland for a change but you will accept a lakh of rupees for wells for Harijans or for schools and hospitals for them. All self has got to

be eliminated and the problem is simplified."

"But what about my personal expense?"

"You have to act on the principle that a labourer is worthy of his hire. You must not hesitate to accept your minimum wage. Everyone of us is doing the same thing. Bhansali's wage is just wheat flour and neem leaves. We cannot all be Bhansalis, but we can try to approximate to that life. Thus I will be satisfied with having my livelihood, but I must not take a rich man to accommodate my son. My only concern is to keep my body and soul together so long as I serve the community."

"But so long as I drew that allowance from him, is it not my duty to remind him continually of the unenviableness of his position and to tell him that he must cease to be owner of all that he does not need for his bare living?"

"Oh yes, that is your duty''.

"But there are wealthy and wealthy. There are some who may have made their pile from alcoholic traffic/"

"Yes, you will certainly draw a line. But whilst you will not accept money from a brewer, I do not know that will happen if you have made an appeal for funds. Will you tell the people that only those who have justly earned their money will pay? I would rather withdraw the appeal than expect any money on those terms. Who is to decide whether one is just or otherwise? And justice too is a relative term. If we will but ask ourselves, we will find that we have not been just all our lives. The Gita says in effect that every one is tarred with the same brush; so rather than judge others, live in the world untouched or unaffected by it. Elimination of self is the secret."

"Yes, I see," said Pierre Ceresole, and remained silent for a few minutes. Then with a sigh he said: "But one sometimes finds himself in a most embarassing position. I have met people in Bihar working from morning until evening for less than a couple of annas, sometimes less than an anna, and they have often told me that they would very much like to dispossess the wealthy around them of their ill-gotten gains. I have stood speechless before them by reminding them of you."

Harijan, 1-6-1935, pp 121-22

Q. How is it possible to earn lakhs in a righteous way? Jamnalalji, the merchant prince, used to say it was not. Moreover, however careful a rich man is, he is bound to spend more on himself than his actual requirements merit. Therefore, why do not lay more stress on not becoming wealthy than on trusteeship of riches?

A. The question is apt and has been put to me before. What Jamnalalji could have meant was in the Gita sense that every action is tainted. It is my conviction that it is possible to acquire riches without consciously doing wrong. For example I may light on a gold mine in my one acre of land. But I accept the propostion that it is better not to desire wealth than to acquire it, and become its trustee. I gave up my own long ago, which should be proof enough of what I would like others to do. But what am I to advise those who are already wealthy or who would not shed the desire for wealth? I can only say to them that they should use their wealth for service. It is true that generally the rich spend more on themselves than they need. But this can be avoided. Jamnalalji spent far less on himself than men of his own economic status and even than many middle class men. I have come across innumerable rich persons who are stingy on themselves, and they do not think that they acquire merit in so doing.

The same applies to the sons of the wealthy. Personally I do not believe in inherited riches. The well-to-do should educate and bring up their children so that they may learn how to be independent. The tragedy is that they do not do so. Their children do get some education, they even recite verses in praise of poverty, but they have no compunction about helping themselves to parental wealth. That being so, I exercise my common sense and advise what is practicable. Those of us, however, who consider it a duty adopt poverty and believe in and desire economic equality may not be jealous of the rich but should exhibit real happiness in our poverty which others may emulate. The said fact is that those who are thus happy are few and far between.

Harijan, 8-3-1942, p. 67

**Doctrine of Equal Distribution**

The real implication of equal distribution is that each man shall have the wherewithal to supply all his natural needs and no more. For example, if one man has a weak digestion and requires only a quarter of a pound of flour for his bread and another needs a pound, both should be in a position to satisfy their wants. To bring this ideal into being the entire social order has got to be reconstructed. A society based on non-violence cannot nurture any other ideal. We may not perhaps be able to realize the goal, but we must bear it in mind and work unceasingly to near it. To the same extent as we progress towards our goal we shall find contentment and happiness, and to that extent too shall we have contributed towards the bringing into being of a non-violent society.

It is perfectly possible for an individual to adopt this way of life without having to wait for others to do so. And if an individual can observe a certain rule of conduct, it follows that a group of individuals can do likewise. It is necessary for me to emphasize the fact that no one need wait for anyone else in order to adopt a right course. Men generally hesitate to make a beginning if they feel that the objective cannot be hand in its entirety. Such an attitude of mind is in reality a bar to progress.

Now let us consider how equal distribution can be brought about through non-violence. The first step towards it is for him who has made this ideal part of his being to bring about the necessary changes in his personal life. He would reduce his wants to a minimum, bearing

in mind the poverty of India. His earnings would be free of dis-honesty. The desire for speculation would be renounced. His habitation would be keeping with the new mode of life. There would be self-restraint exercised in every sphere of life. When he has done all that is possible in his own life, then only will he be in a position to preach this ideal among his associates and neighbours.

Indeed at the root of this doctrine of equal distribution must lie that of the trusteeship of the wealthy for the superfluous wealth possessed by them. For according to the doctrine they may not possess a rupee more than their neighbours. How is this to be brought about? Non-violently? Or should the wealthy be dispossessed of their possessions? To do this we would naturally have to resort to violence. This violent action cannot benefit society. Society will be the poorer, for it will lose the gifts of a man who known how to accumulate wealth. Therefore the non-violent way is evidently superior. The rich man will be left in possession of his wealth, of which he will use what he reasonably requires for this personal needs and will act as a trustee for the remainder to be used for society. In his argument honesty on the part of the trustee is assumed.

As soon as a man looks upon himself as a servant of society, earns for its sake, spends for its benefit, then purity enters into his earnings and there is Ahimsa in his venture. Moreover, if men's minds turn towards this way of life, there will come about a peaceful revolution in society, and that without any bitterness.

It may be asked whether history at any time records such a change in human nature. Such changes have certainly taken place in individuals. One may not perhaps be able to point to them in a whole society. But this only means that up till now there has never been an experiment on a large scale on non-violence. Somehow or other the wrong belief has taken possession of us that Ahimsa is pre-eminently a weapon for individuals and its use should, therefore, be limited to that sphere. In fact this is not the case. Ahimsa is definitely an attribute of society. To convince people of this truth is at once my effort and my experiment. In this age of wonders no one will say that a thing or idea is worthless because it is new. To say it is impossible because it is difficult, is again not in consonance with the spirit of the age. Things undreamt of are daily being seen, the impossible is ever becoming possible.

We are constantly being astonished these days at the amazing discoveries in the field of violence. But I maintain that far more undreamt of and seemingly impossible discoveries will be made in the field of non-violence. The history of religion is full of such examples.

If, however, in spite of the utmost effort, the rich do not become guardians of the poor in the true sense of the term and the latter are more and more crushed and die of hunger, what is to be done? In trying to find the solution to this riddle I have lighted on non-violent non-co-operation and civil disobedience as the right and infallible means. The rich cannot accumulate wealth without the co-operation of the poor in society. Man has been conversant with violence from the beginning, for he has inherited this strength from the animal in his nature. It was only when he rose from the state of quadruped (animal) to that of a biped (man) that the knowledge of the strength of Ahimsa entered into his soul. This knowledge has grown within him slowly but surely. If this knowledge were to penetrate to and spread amongst the poor, they would become strong and would learn how to free themselves by means of non-violence from th e crushing inequalities which have brought them to the verge of starvation.

Harijan, 25-8-1940, p. 260-1

*Courtesy* : Trusteeship by M.K. Gandhi
Compiled by Ravindra Kelkar
Published by Navajivan
Publising House,
Ahmedabad

## OBITUARY

### Sri. C. S. Subbanna

It is with a profound sense of regret that we inform our readers about the sad and sudden demise of our member Sri. C. S. Subbanna on 4th February at about 6.30 p.m. at Mumbai. He leaves behind his wife Nagamani and three children Srikara, Srivatsa and Shruthi, Subbanna was 56. Son of the well known veena player Sri C.K. Shankara Narayana Rao, Subbanna was a scientist working with B.A.R.C. An active member of the Association he was member of the Managing Committee of the Association during the years 1992-96. He was a enthusiastic trekker. Jovial and friendly Subbanna will be missed by all his friends at the Association

Nesaru prays that his family members are endowed with strength to bear this loss.

**TRIMURTI**
**JEWELLERS**
**GOLD AND DIAMOND ORNAMENTS**
460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-19.
Phone : **402 34 85**

## ಯಶವಂತ ಚಿತ್ತಾಲರಿಗೆ 'ಶ್ರೀ ಗುರುನಾರಾಯಣ ಸಾಹಿತ್ಯ ಪ್ರಶಸ್ತಿ -2001'



ಲಕ್ಷ್ಮಯ ಪತ್ರಿಕೆಯ ಪ್ರಧಾನ ಸಂಪಾದಕ, ಲೇಖಕ ಎಂ. ಬಿ. ಕುಕ್ಯಾನರು ಸ್ಥಾಪಿಸಿದ ಶಾಶ್ವತ ನಿಧಿಯಿಂದ ಬಿಲ್ಲವರ ಎಸೋಸಿಯೇಷನ್ ಮುಂಬಯಿ ನೀಡುವ 'ಶ್ರೀ ಗುರುನಾರಾಯಣ ಸಾಹಿತ್ಯ ಪ್ರಶಸ್ತಿ - (2001)' ಗೆ ಮುಂಬಯಿ ನಿವಾಸಿ, ಹಿರಿಯ ಸಾಹಿತಿ ಯಶವಂತ ಚಿತ್ತಾಲರು ಆಯ್ಕೆಯಾಗಿದ್ದಾರೆ. ಕೇವಲ ಮಹಾರಾಷ್ಟ್ರ ವಾಸಿಗಳಿಗೆ ಮೀಸಲಾದ ಈ ಸಾಲಿನ ಪ್ರಶಸ್ತಿಯನ್ನು ಕಳೆದ ಒಂದು ದಶಕದಲ್ಲಿ ಗಣನೀಯ ಸಾಹಿತ್ಯ ಸಾಧನೆ ಮಾಡಿ ವಿಮರ್ಶಕರ ಹಾಗೂ ವಾಚಕರ ಪ್ರಶಂಸೆಗೆ ಪಾತ್ರರಾದ ಯಶವಂತ ಚಿತ್ತಾಲರಿಗೆ ನೀಡಲು ಕವಿ ಡಾ. ಸುನೀತಾ ಶೆಟ್ಟಿ ಹಾಗೂ ವ್ಯಾಸರಾಯ ನಿಂಜೂರುರವರನ್ನೊಳಗೊಂಡು ನಿರ್ಣಾಯಕ ಸಮಿತಿ ನಿರ್ಧರಿಸಿದೆ.

ಮೂಲತಃ ಉತ್ತರ ಕನ್ನಡ ಜಿಲ್ಲೆಯ ಹನೇಹಳ್ಳಿಯವರಾದ ಯಶವಂತ ಚಿತ್ತಾಲರು ಕಳೆದ ಅರ್ಧ ಶತಮಾನದಿಂದ ಮುಂಬಯಿಯಲ್ಲೆ ನೆಲೆಸಿದ್ದಾರೆ. ಹನೇಹಳ್ಳಿ ಮುಂಬಯಿ ಎರಡೂವಿಂದಿಗೂ ಇವರ ಸಾಹಿತ್ಯದ ಪ್ರಬಲವಾದ ಪ್ರೇರಕ ಶಕ್ತಿಗಳಾಗಿ ಉಳಿದಿವೆ. ವಿಜ್ಞಾನದ ವಿದ್ಯಾರ್ಥಿಯಾದ ಚಿತ್ತಾಲರು ರಾಸಾಯನಿಕ ತಂತ್ರಜ್ಞಾನದ ಮಹತ್ವದ ಶಾಖೆಯಾದ ಪೊಲಿಮರ್ ಟೆಕ್ನಾಲಜಿಯಲ್ಲಿ ವಿಶೇಷ ಪರಿಣತಿ ಹಾಗೂ ಮನ್ನಣೆಗಳನ್ನು ಪಡೆದವರು. ಮುಂಬಯಿ ವಿಶ್ವವಿದ್ಯಾಲಯದ ಪ್ಲಾಸ್ಟಿಕ್ ತಂತ್ರಜ್ಞಾನದ ಪದವಿ BSC [Tech]) ಸುವರ್ಣ ಪದಕದೊಂದಿಗೆ ಪಡೆದಿರುವ ಚಿತ್ತಾಲರು ಅನಂತರ ಅಮೇರಿಕೆಯ ಸ್ಟೀವನ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಸ್ನಾತಕೋತ್ತರ ಪದವಿ ಹಲವು ವರ್ಷ ಮಾರ್ಕೆಟಿಂಗ್ ವಿಭಾಗದ ಜನರಲ್ ಮ್ಯಾನೇಜರ್ ಆಗಿದ್ದವರು. ಆ ಕಂಪೆನಿಯ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿ 1985ರಲ್ಲಿ ನಿವೃತ್ತರಾದರು. ನಿವೃತ್ತಿಯ ನಂತರ ಚಿತ್ತಾಲರು ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡರು.

ಯಶವಂತ ಚಿತ್ತಾಲರು ಈವರೆಗೆ ಹಲವು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಸಂದರ್ಶನ (1957), ಆಬೋಲಿನ್ (1960), ಆಟ (1969), ಆಯ್ದ ಕತೆಗಳು (1976), ಕತೆಯಾದಳು ಹುಡುಗಿ (1980), ಬೇನ್ಯಾ (1983), ಚಿತ್ತಾಲರ ಕತೆಗಳು ಸಮಗ್ರ (1983), ಸಿದ್ಧಾರ್ಥ (1988), ಕಮಟೆಗೆ ಬಂದಾ ಕಿಂದರಜೋಗಿ (1997), ಐವತ್ತೊಂದು ಕತೆಗಳು (2002), ಓಡಿ ಹೋದಾ ಮುಟ್ಟಿ ಬಂದಾ (2001), ಇವು ಇವರ ಕಥಾ ಸಂಕಲನಗಳು.ಮೂರು ದಾರಿಗಳು (1964), ಶಿಕಾರಿ (1979), ಛೇದ (1985), ಪುರುಷೋತ್ತಮ (1990), ಕೇಂದ್ರ ವೃತ್ತಾಂತ (1997), ಇವು ಚಿತ್ತಾಲರ ಕಾದಂಬರಿಗಳು. ಸಾಹಿತ್ಯ, ಸೃಜನಶೀಲತೆ ಮತ್ತು ನಾನು (1980), ಸಾಹಿತ್ಯದ ಸಪ್ತಧಾತುಗಳು (2001), ಇವು ಇವರ ಪ್ರಬಂಧ ಸಂಕಲನಗಳು. ಆಧುನಿಕ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿ ಅಗ್ರಮಾನ್ಯ ಕಥೆ, ಕಾದಂಬರಿಕಾರರೆಂದು ಖ್ಯಾತರಾಗಿರುವ ಚಿತ್ತಾಲರಿಗೆ ಅನೇಕ ರಾಷ್ಟ್ರ ಮಟ್ಟದ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿಗಳು ಲಭಿಸಿವೆ

# ಸುತ್ತಮುತ್ತ

### ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತ ಸದಾನಂದ ಸುವರ್ಣರಿಗೆ ಕನ್ನಡ ವಿಭಾಗದ ಅಭಿನಂದನೆ

ನಾಟಕಕಾರ, ನಟ, ನಿರ್ದೇಶಕ, ರಂಗಶಿಕ್ಷಕ ಹೀಗೆ ನಾನಾ ನೆಲೆಗಳಲ್ಲಿ ರಂಗಭೂಮಿಯೊಂದಿಗೆ ಘನಿಷ್ಠ ಸಂಬಂಧವಿಟ್ಟುಕೊಂಡು ಕನ್ನಡ ರಂಗಭೂಮಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದ ಸದಾನಂದ ಸುವರ್ಣ ಅವರಿಗೆ 2001ನೆಯ ಸಾಲಿನ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ದೊರಕಿರುವ ಸಂದರ್ಭದಲ್ಲಿ ಅವರನ್ನು ನೇಸರು ಹಾರ್ದಿಕವಾಗಿ ಅಭಿನಂದಿಸಿದೆ.

### ಕನ್ನಡ ಸಂಘ,ಕೆ.ಜೆ. ಸೋಮಯ್ಯ ಕಾಲೇಜು

ಸಾಹಿತ್ಯ ರಚನೆ ಅವಸರದ ಕ್ರಿಯೆಯಲ್ಲ, ಅಧ್ಯಯನದಿಂದ ಅನುಭವದಿಂದ ಕೂಡಿದ ಸಾಹಿತ್ಯ ರಚನೆ ಮೌಲಿಕವಾಗುತ್ತದೆ. ಸಾಹಿತ್ಯವನ್ನು ಓದುವ ಅಭಿರುಚಿಯನ್ನು ಬೆಳೆಸಿಕೊಳ್ಳಬೇಕು. ಓದುಗರಲ್ಲಿ ಒಳ್ಳೆಯ ತಾಳ್ಮೆ, ಶಕ್ತಿ ಬೆಳೆಯುತ್ತದೆ. ನಾವು ಮಾಡುವ ಕೆಲಸಗಳಲ್ಲಿ ನಮಗೆ ಪ್ರೀತಿಬೇಕು. ಜಗತ್ತಿನಲ್ಲಿ ನಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳುವಂತೆ ವಿದ್ಯಾರ್ಥಿಗಳು ಹೆಚ್ಚು ಶ್ರಮಿಸಬೇಕೆಂದು ಖ್ಯಾತ ಕಾದಂಬರಿಕಾರ ಸಾಹಿತಿ ಬೋಳ ಚಿತ್ತರಂಜನದಾಸ ಶೆಟ್ಟಿ ಅವರು ಸಾರಿದರು. ಬೋಳ ಚಿತ್ತರಂಜನದಾಸ ಶೆಟ್ಟಿಯವರು ಸೋಮೈಯಾ ಕಾಲೇಜಿನ ಕನ್ನಡ ಸಂಘದ ವತಿಯಿಂದ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ವಿವಿಧ ಕ್ಷೇತ್ರಗಳಲ್ಲಿ ಬೆಳಗಲು ಇಂದು ಮುಕ್ತ ಅವಕಾಶವಿದೆ. ಗತ ವರ್ಷದ ಬಿ.ಎ. ಪರೀಕ್ಷೆಯಲ್ಲಿ ರಾಜೇಶ ಹೆಗ್ಡೆಯವರು ಕನ್ನಡದಲ್ಲಿ ಅತ್ಯಧಿಕ ಅಂಕಗಳಿಸಿ ಮುಂಬಯಿ ವಿಶ್ವವಿದ್ಯಾಲಯದಿಂದ ಬಂಟರ ಸಂಘದ ಬಂಗಾರದ ಪದಕ ವಿಜೇತರಾಗಿ ತುಂಬಾ ಶ್ಲಾಘನೀಯ ಸಾಧನೆಯಾಗಿದೆ. ಇತರರಿಗೆ ಆದರ್ಶನೀಯವಾಗಿದೆ ಯೆಂದು ಅಧ್ಯಕ್ಷ ಸ್ಥಾನದಿಂದ ಪ್ರಾಂಶುಪಾಲರಾದ ಎಸ್.ಎನ್. ಅರಬಟ್ಟೆಯವರು ಘೋಷಿಸಿದರು.

ಮಕ್ಕಳಿಗೆ ಎಳೆಯದರಲ್ಲಿಯೇ ಪರಿಶ್ರಮ, ಧ್ಯೇಯ, ಸಾಧನೆ, ಪ್ರತಿಭೆಯ ಬೆಳವಣಿಗೆಗೆ ಪೋಷಕವಾಗುವಂತಹ ವಿಚಾರಗಳನ್ನು ಹೇಳಿಕೊಡಬೇಕು. ತದ್ರೀತಿಯಲ್ಲಿ ಮಾರ್ಗದರ್ಶನ ನೀಡಬೇಕು. ರಾಜೇಶ ಹೆಗ್ಡೆಯವರು ವಿದ್ಯಾರ್ಥಿಗಳು ಅನುಸರಿಸಬೇಕಾದ ಪರಮ ಸಾಧನೆ ಮಾಡಿದ್ದಾನೆ. ಕನ್ನಡಿಗರು ಅಭಿಮಾನ ಪಡುವಂತೆ ಕನ್ನಡದ ಕೀರ್ತಿಯನ್ನು ಮುಂಬಾಯಿ ವಿಶ್ವವಿದ್ಯಾಲಯದ ಮಟ್ಟಕ್ಕೆ ಮುಟ್ಟಿಸಿದ್ದಾನೆಯೆಂದು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಸಂಜೀವ ಶೆಟ್ಟಿಯವರು ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದರು.

ಆರಂಭದಲ್ಲಿ ಸಂಗೀತ ಶೆಟ್ಟಿಯವರು ಸ್ವಾಗತಿಸಿದರು, ರಾಧಾ ಕೋಟ್ಯಾನ್ ಅವರು ಅತಿಥಿಗಳನ್ನು ಪರಿಚಯಿಸಿದರು. ಕಾರ್ಯದರ್ಶಿ ಜಯಶೀಲ್ ಆರ್. ಶೆಟ್ಟಿ ವಂದಿಸಿದರು.

ಈ ಕಾರ್ಯಕ್ರಮದ ಯಶಸ್ಸಿಗಾಗಿ ಹರೀಶ್ ಪೂಜಾರಿ,ಸಂದೀಪ್ ಶೆಟ್ಟಿ, ಸುಮೀತ ಬಂಗೇರ, ಉದಯ ಪೂಜಾರಿ, ವಿನೋದ್ ಪೂಜಾರಿ, ಅರ್ಚನಾ ಪೂಜಾರಿಯವರು ಶ್ರಮಿಸಿದರು.

ಶ್ರೀ ಬೋಳ ಚಿತ್ತರಂಜನದಾಸ ಶೆಟ್ಟಿ ಅವರು ಮುಂಬೈ ವಿಶ್ವವಿದ್ಯಾಲಯದ ಬಂಗಾರದ ಪದಕ ಬಂಟರ ಸಂಘದ ವಿಜೇತ ರಾಜೇಶ್ ಹೆಗ್ಡೆ ಅವರನ್ನು ನೆನಪಿನ ಕಾಣಿಕೆ, ಗ್ರಂಥ, ಪುಷ್ಪಗುಚ್ಛ ನೀಡಿ ಕನ್ನಡ ಸಂಘದ ವತಿಯಿಂದ ಸತ್ಕರಿಸಿದರು. ಸೋಮೈಯ್ಯ ಕಾಲೇಜಿಗೆ ಕನ್ನಡ ವಿಭಾಗಕ್ಕೆ ತನ್ನ ಯಶಸ್ಸಿಗೆ ಕಾರಣರಾದವರಿಗೆ ಹೆಗ್ಡೆಯವರು ಕೃತಜ್ಞತೆ ಸಲ್ಲಿಸುತ್ತಾ ಸನ್ಮಾನಕ್ಕೆ ಉತ್ತರಿಸಿದರು.

ಮುಂಬಯಿ ವಿಶ್ವವಿದ್ಯಾಲಯದ ಬಿ.ಎ. ಅಂತಿಮ ಪರೀಕ್ಷೆಯಲ್ಲಿ ಕನ್ನಡ ಮೂರು ಪೇಪರುಗಳಲಿ ಅತ್ಯಧಿಕ ಅಂಕಗಳಿಸಿದವರಿಗೆ ಪ್ರತಿವರುಷ ಬಂಗಾರದ ಪದಕವನ್ನು ಕೊಡಲಾಗುತ್ತದೆ.

### ಸ್ಪರ್ಧಾತ್ಮಕವಾದ ಅದ್ದೂರಿಯ ಮಕ್ಕಳ ಮೇಳ -2002

ಮುಂಬಯಿ : ಕರ್ನಾಟಕ ಸಂಘ ಮುಂಬಯಿ ಪ್ರತಿ ವರ್ಷದಂತೆ ಈ ವರ್ಷವೂ ಮಹಿಳಾ ವಿಭಾಗ ಮತ್ತು ವಿದ್ಯಾವಿಕಾಸ ಸಮಿತಿಯವರ ಜಂಟಿ ಆಶ್ರಯದಲ್ಲಿ ವಿವಿಧ ಸ್ಪರ್ಧೆಗಳನ್ನೊಳಗೊಂಡ ಮಕ್ಕಳ ಮೇಳವನ್ನು ದಿನಾಂಕ 12-01-02ರಂದು ಅದ್ದೂರಿಯಾಗಿ ಆಚರಿಸಿತು. ಮುಂಬಯಿ ಹಾಗೂ ಥಾಣೆ ಜಿಲ್ಲೆಯ 42 ಶಾಲೆಯಿಂದ 1300ಕ್ಕಿಂತಲೂ ಹೆಚ್ಚು ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಿ ತಮ್ಮ

Regn. No. 040015/86
Regn. No. TECH/47-202/MBI-2002
Date of Posting : 10-2-2002

ಪ್ರತಿಭೆಯನ್ನು ಪ್ರದರ್ಶಿಸಿದರು.

ಕಿರುತೆರೆಯ 'ಚಲ್ತಿಕಾ ನಾಮ್ ಅಂತಾಕ್ಷರಿ'ಯಲ್ಲಿ ಒಂದು ಲಕ್ಷ ರೂಪಾಯಿ ಬಹುಮಾನ ಪಡೆದ ಕುಮಾರಿ ಸೌಮ್ಯ ಜೆ. ಪುತ್ರನ್‌ರವರು 'ಮಕ್ಕಳ ಮೇಳ'ವನ್ನು ದೀಪ ಪ್ರಜ್ವಲಿಸಿ ಉದ್ಘಾಟಿಸಿದರು. ಇವರು ತಮ್ಮ ಭಾಷಣದಲ್ಲಿ ''ಮಕ್ಕಳ ಮೇಳವನ್ನು ಉದ್ಘಾಟಿಸುವ ಅವಕಾಶ ನನಗೆ ನೀಡಿದರಿಂದ ಅತೀವ ಆನಂದ ಹಾಗೂ ಹೆಮ್ಮೆ ಎನಿಸುತ್ತದೆ. ಎಲ್ಲರಿಗೂ ಶುಭವಾಗಲಿ ಎಂದು ಸ್ಪರ್ಧಿಗಳಿಗೆ ಹಾರೈಸಿದರು. ಮಹಿಳಾ ವಿಭಾಗದ ಸದಸ್ಯೆಯರಿಂದ ಪ್ರಾರ್ಥನೆಯಾದ ನಂತರ ಸಂಯೋಜಕಿ ಗಾಯತ್ರಿ ರಾಮುರವರು ಸ್ವಾಗತ ಭಾಷಣ ಮಾಡಿದರು. ಯುವ ವಿಭಾಗದ ಸಂಯೋಜಕ ದಿನೇಶ್ ಕುಡ್ವರವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಶಿಕ್ಷಣಾಧಿಕಾರಿ (ಮುನ್ಸಿಪಲ್ ಶಾಲೆಯ) ಹಾಗೂ ವಿದ್ಯಾವಿಕಾಸ ಸಮಿತಿಯ ಸಂಯೋಜಕಿ ಶಾರದಾ ಶೆಟ್ಟಿಯವರು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸ್ಪರ್ಧೆಯ ಬಗ್ಗೆ ವಿವರಣೆಗಳನ್ನು ನೀಡಿದರು. ಸಂಘದ ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್ ಉದ್ಘಾಟಕಿಯರ ಪರಿಚಯ ಮಾಡಿದರು. ವಿದ್ಯಾವಿಕಾಸ ಸಮಿತಿಯ ಸದಸ್ಯರಾದ ಎ.ವಿ. ಮೇಘರಾಜರವರು ವಂದನಾರ್ಪಣೆ ಗೈದರು.

ಸಂಘದ ಆವರಣ ಹಾಗೂ ಸಭಾಗೃಹವನ್ನು ಕೂಡಿ ಪಂಜೆ ಮಂಟಪ, ದಿನಕರ ಮಂಟಪ ಮತ್ತು ರಾಜರತ್ನಂ ಮಂಟಪ ಎಂಬ ಮೂರು ವೇದಿಕೆಯಲ್ಲಿ 'ಮಕ್ಕಳ ಮೇಳ' ಬೆಳಿಗ್ಗೆಯಿಂದ ಸಂಜೆಯವರೆಗೆ ನಡೆಯಿತು.

### ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಉಪನ್ಯಾಸಗಳು

ಮುಂಬಯಿ : ಬೆಂಗಳೂರಿನ ರಾಜ್ಯ ಕನ್ನಡ ಸಾಹಿತ್ಯ ಪರಿಷತ್, ಈ ವರುಷ ನಡೆಸಲೆಂದು ಮಹಾರಾಷ್ಟ್ರ ಘಟಕಕ್ಕೆ ಕೊಡ ಮಾಡಿದ ಉಪನ್ಯಾಸಗಳಲ್ಲಿ ಎರಡನ್ನು ಅಕ್ಕಲಕೋಟ ಮಹಾವಿದ್ಯಾಲಯದಲ್ಲಿ 19-1-2002ರಂದು ಏರ್ಪಡಿಸಲಾಗಿತ್ತು.

ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಮುಂಬಯಿ ಮತ್ತು ಅಕ್ಕಲಕೋಟ ಮಹಾವಿದ್ಯಾಲಯ ಅಕ್ಕಲಕೋಟ, ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆಸಿದ ಈ ಕಾರ್ಯಕ್ರಮಕ್ಕೆ ಮಹಾವಿದ್ಯಾಲಯದ ಚೇರಮನ್, ಶ್ರೀ ಶಿವಶರಣ ಬೇಡಗಿ, ಉದ್ಘಾಟಕರಾಗಿ ಆಗಮಿಸಿ ಕನ್ನಡ ಕಾರ್ಯಕ್ರಮವನ್ನು ಪ್ರೋತ್ಸಾಹಿಸಿದರು. ದೀಪ ಬೆಳಗಿಸಿ ಭಾಷಣ ಮಾಡಿದರು. ಶಾಲು ಹೊದಿಸಿ ಡಾ. ಜಿ.ಡಿ. ಜೋಶಿಯವರನ್ನು ಸನ್ಮಾನಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ, ಮಹಾರಾಷ್ಟ್ರ ಘಟಕದ ಅಧ್ಯಕ್ಷ, ಡಾ. ಜಿ.ಡಿ. ಜೋಶಿ ಅವರು ಜ್ಞಾನ ಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಭಾವ ಚಿತ್ರವನ್ನು ಅನಾವರಣಗೊಳಿಸಿದರು. ಕಾರ್ಯಕ್ರಮದ ಕೊನೆಗೆ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಗಡಿಭಾಗದಲ್ಲಿ ಕನ್ನಡವನ್ನು ಉಳಿಸಿ, ಪ್ರೋತ್ಸಾಹಿಸಿ ಬೆಳೆಸಬೇಕಾದ ಮಹತ್ವದ ಕಾರ್ಯದ ಬಗ್ಗೆ ಸಭಿಕರ ಗಮನ ಸೆಳೆದರು.

ರಾಜ ಕಾರ್ಯಾಸಕ್ತ ಶ್ರೀ ಜಿ.ಎನ್. ಅಯ್ಯರ್, ದತ್ತಿನಿಧಿಯ ಉಪನ್ಯಾಸವನ್ನು ಡಾ. (ಶ್ರೀಮತಿ) ಎಸ್. ಎಂ. ಹೆಗಡೆ ಮಾಡಿದರು. ವಿಷಯ ಶೂನ್ಯ ಸಂಪಾದನೆಯಲ್ಲಿ ಶರಣರ ಬದುಕು. ಪ್ರೊ|| ಗುರುಲಿಂಗ ದಬಾಲೆ ಅವರು 'ಬೀದರ್ ಜಿಲ್ಲೆಯ ಅನುಭವಿ ಕವಿಗಳು' ಎಂಬ ವಿಷಯದ ಕುರಿತು ಭಾಷಣ ಮಾಡಿದರು. ಈ ದತ್ತಿ ಉಪನ್ಯಾಸದ ದಾನಿಗಳು ಮುಂಬಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿ. ಕಾಲೇಜಿನ ಕನ್ನಡ ಜನಪದ ಬಿ.ಎ. ಮತ್ತು ಎಂ.ಎ. ವಿದ್ಯಾರ್ಥಿಗಳಿಂದ ಪ್ರಾರ್ಥನೆ, ಸ್ವಾಗತ ಗೀತೆಗಳಾದವು. ಕಾಲೇಜಿನ ಪ್ರಿನ್ಸಿಪಾಲ್, ಪ್ರೊ. ಎಂ.ಎ. ಶೇಖ ಅವರಿಂದ ಸ್ವಾಗತ, ಪ್ರೊ. ಶಂಕರ ಗೌಡ ಬಿರಾದಾರ್ ಅವರಿಂದ ಪರಿಚಯ ಭಾಷಣ ಮತ್ತು ಪ್ರೊ.ಎಂ.ಎಂ. ಆಲೂರಕರ್ ಅವರಿಂದ ನಿರ್ದೇಶನ, ಎಂ.ಎ. ವಿದ್ಯಾರ್ಥಿಯಿಂದ ಧನ್ಯವಾದಗಳು ಜರಗಿದುವು.

### ಕರ್ನಾಟಕ ಸಂಘ ಮುಂಬಯಿಯ ಮಹಿಳಾ ವಿಭಾಗದ ಆಶ್ರಯದಲ್ಲಿ ನಡೆದ ಎರಡು ಅರ್ಥಪೂರ್ಣ ಕಾರ್ಯಕ್ರಮಗಳು

ಮುಂಬಯಿ : ಕರ್ನಾಟಕ ಸಂಘ ಮುಂಬಯಿಯ ಮಹಿಳಾ ವಿಭಾಗದ ಆಶ್ರಯದಲ್ಲಿ ದಿನಾಂಕ 10-1-2002ರಂದು ಸಂಘಧ ಕಿರು ಸಭಾಗೃಹದಲ್ಲಿ ಎರಡು ಅರ್ಥ ಪೂರ್ಣ ಕಾರ್ಯಕ್ರಮಗಳು ಜರಗಿದವು.

ಮೊದಲನೆ ಕಾರ್ಯಕ್ರಮ 'ಸಂಶೋದಕಿಯರೊಂದಿಗೆ ಸಂವಾದ' ಇದಕ್ಕೆ ಇತಿಹಾಸ ಸಂಶೋದಕಿಯರಾದ ಡಾ. ಲೀಲಾ ಜೋಯಿಸ್ ಹಾಗು ವಿಜ್ಞಾನ ಸಂಶೋದಕಿಯರಾದ ಡಾ. ಶೈಲಾ ನಾರಾಯಣರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. 'ಆಧುನಿಕ ಇತಿಹಾಸ' ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿದ ಡಾ. ಲೀಲಾ ಜೋಯಿಸರು ತಮ್ಮ ಅನುಭವಗಳನ್ನು ಹೇಳುತ್ತಾ ''ನಾನು ಸುಮಾರು 25-30 ಪ್ರಬಂಧಗಳನ್ನು ಈ ವರೆಗೆ ಮಂಡಿಸಿದ್ದೇವೆ. ಮದ್ರಾಸ್, ಮೈಸೂರು, ಮುಂಬಯಿಯ ವಿಲ್ಸನ್ ಕಾಲೇಜಿನ ಲೈಬ್ರರಿಗೂ ಭೇಟಿ ನೀಡಿದ್ದೆ. ಅಲ್ಲಿಯ ಶಿಸ್ತು, ಚುರುಕುತನ ಯಾರೂ ಮೆಚ್ಚುವಂತಹದೇ ಎಂದು ತಿಳಿಸಿದರು. ನಂತರ ಸಂಘದ ಸದಸ್ಯೆಯರಾದ ಡಾ. ಸುನೀತಿ ಉದ್ಯಾವರ, ಮಹಿಳಾ ವಿಭಾಗ ಸಂಯೋಜಕಿ ಗಾಯತ್ರಿ ರಾಮು, ಶೈಲಾ ಮೂರ್ತಿ, ರೇಖಾ ಉಪ್ಪೋಣಿ, ವೀಣಾ ಪ್ರಭು, ಜಯಶ್ರೀ ಪಾಟೀಲ್ ಮುಂತಾದವರೆಲ್ಲರ ಪ್ರಶ್ನೆಗಳಿಗೆ ಲೀಲಾ ಜೋಯಿಸರು ಸೂಕ್ತ ಉತ್ತರವನ್ನು ನೀಡಿದರು.

ಡಾ. ಶೈಲಾ ನಾರಾಯಣರವರು ವಿಜ್ಞಾನ ಸಂಶೋಧಕಿಯಾಗಿದ್ದು 'ರೇಬಿಸ್' ರೋಗದಿಂದಾಗುವ ನಾವು ನೋವುಗಳನ್ನು ತಪ್ಪಿಸುವ ಬಗೆ ಆಳವಾದ ಅಧ್ಯಯನ ಮಾಡಿದ್ದಾರೆ. 'ರೇಬಿಸ್' ರೋಗ ಹರಡುವ ವಿವರಣೆ, ಚಿಕಿತ್ಸಾಕ್ರಮ, ಪ್ರಥಮೋಪಚಾರ ವೈದ್ಯಕೀಯ ಸಲಹೆ ಮಂತಾದವುಗಳ ಬಗ್ಗೆ ತಿಳಿಸಿದರು. ಜೊತೆಗೆ ಮಹಿಳೆಯರ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ನೀಡಿದರು.

ಮಹಿಳಾ ವಿಭಾಗದ ಸದಸ್ಯೆಯರಾದ ಶೈಲಾಮೂರ್ತಿ ಮತ್ತು ಶೀಲಾ ಉಚ್ಚಿಲಕರ್‌ರವರ ಪ್ರಾರ್ಥನೆಯಿಂದ ಕಾರ್ಯಕ್ರಮವು ಆರಂಭವಾಯ್ತು. ಮಹಿಳಾ ವಿಭಾಗದ ಸಂಯೋಜನಕಿ ಗಾಯತ್ರಿ ರಾಮು ಸ್ವಾಗತ ಭಾಷಣ ಮಾಡಿದರು. ಶೈಲಾ ಮೂರ್ತಿಯವರು ಡಾ. ಶೈಲಾ ನಾರಾಯಣರವರ ಪರಿಚಯ ಮಾಡಿದರೆ ಶೀಲಾ ಉಚ್ಚಿಲಕರಂ ಡಾ. ಲೀಲಾ ಜೋಯಿಸ್ ಅವರ ಪರಿಚಯ ಮಾಡಿದರು. ಕಾರ್ಯಕ್ರಮದ ನಿರ್ವಹಣೆಯನ್ನು ಅಲುಮೇಲುರವರು ಮಾಡಿದರು. ಡಾ. ಸುನೀತಿ ಉದ್ಯಾವರರವರು ವಂದನಾರ್ಪಣೆ ಗೈದರು.

ಎರಡನೆ ಕಾರ್ಯಕ್ರಮ ''ನಿಮ್ಮ ಎಲುಬಿನ ಶಕ್ತಿಯನ್ನು ತಿಳಿಯಿರಿ'' ಮೂಳೆ ತಜ್ಞರಿಂದ ಉಚಿತ ತಪಾಸಣೆಯ ಕಾರ್ಯಕ್ರಮವಾಗಿದ್ದು ನಿಕೋಲಸ್ ಪಿರಾಮಿಲ್ ಇಂಡಿಯಾ ಲಿಮಿಟೆಡ್‌ರವರು ಇದರ ಪ್ರಾಯೋಜಕರಾಗಿದ್ದರು. ನೂತನ ಯಂತ್ರದ ಸಹಾಯದಿಂದ ಎಲುಬಿನ ಶಕ್ತಿ ಮತ್ತು ರೋಗಗಳ ತಪಾಸಣೆಯನ್ನು ಡಾ. ಗಿರೀಶ್ ಲೀಲೆ ಮಾಡಿದರು ಕಂಪನಿಯ ಸಿಬ್ಬಂಧಿ ಮಯುರೇಶ್ ಅಪ್ಟೆ ಸಹಕರಿಸಿದರು. ಡಾ. ಲೀಲೆಯವರು ತಪಾಸನೆಯ ಜೊತೆ ಸಲಹೆ ಸೂಚನೆಗಳನ್ನು ನೀಡಿ ಅವಶ್ಯಕತೆ ಇದ್ದವರಿಗೆ ರಿಯಾಯತಿ ದರದಲ್ಲಿ ಔಷಧಿಯನ್ನು ವಿಧಿಸಿದರು. ಸುಮಾರು 60ಕ್ಕಿಂತಲೂ ಹೆಚ್ಚು ಸದಸ್ಯರು ಉಚಿತ ತಪಾಸಣೆಯ ಲಾಭವನ್ನು ಪಡೆದರು.

ಸಂಘದ ಸದಸ್ಯರಾದ ರವಿ. ರಾ. ಅಂಚನ್‌ರವರು ಕಾರ್ಯಕ್ರಮದಲ್ಲಿ ಪಾಲ್ಗೊಂಡವರನ್ನು ಸ್ವಾಗತಿಸಿ ಶುಭೇಚ್ಛೆ ನೀಡಿದರು. ಕಾರ್ಯದರ್ಶಿ ಭರತ್‌ಕುಮಾರ್ ಪೊಲಿಪು ಡಾ. ಗಿರೀಶಣ ಲೀಲೆಯವರಿಗೆ ಹೂ ಗುಚ್ಛ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಸಂಘದ ಸದಸ್ಯರಾದ ಓಂದಾಸ್ ಕಣ್ಣಂಗಾರ್, ದಿನೇಶಕುಡ್ವ, ಗಾಯತ್ರಿ ರಾಮು, ಡಾ. ಸುನೀತಿ ಉದ್ಯಾವರ, ವಸಂತ ಶ್ರೀರಾವ್ ಮೊದಲಾದವರೆಲ್ಲ ಉಪಸ್ಥಿತರಿದ್ದರು.

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38